Mr. SPEAKER.—I do not want any debate before I apply my mind. I will look into every one of them and others also wherever possible.

MYSORE OFFICIAL LANGUAGE BILL, 1963

(*Motion to consider*—continned.)

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ ಮೊನ್ನೆ ಸಂಜೆ ನಾನು ಮಾತನಾಡುತ್ತಾ ಇದ್ದೆ. ಆಗ ಮಾಡುತ್ತಾ ಇದ್ದ ಭಾಷಣವನ್ನು ಈಗ ಮುಂದುವರಿಸುತ್ತೇನೆ. ಮೊನ್ನೆ ರಾತ್ರಿ ಈ ಮಾನ್ಯ ಸಭೆಯ ಸದಸ್ಯರೊಬ್ಬರು ಆಕಸ್ಮಿಕ ಮರಣಕ್ಕೆ ಒಳಗಾಗಿ ನೆನ್ನೆ ಸಭೆಯನ್ನು ಮುಂದೆ ಹಾಕಲಾಯಿತು. ಆದ್ದರಿಂದ ನಾನು ಮೊನ್ನೆಯಿಂದ ನನ್ನ ಕಾಲ ಮೇಲೆ ನಿಂತುಕೊಂಡು ಅರ್ಧ ಭಾಷಣ ಆಗಿರುವುದರಿಂದ ಒಂದು ರೀತಿಯಲ್ಲಿ ನಿದ್ದೆಗೇಡು ಎಂದು ಹೇಳಬಹುದು. ಭಾಷಣ ಮುಗಿಯದೇ ಇರುವುದರಿಂದ ತೊಂದರೆಯಾಗುತ್ತದೆ, ಹಿಂದೆ ಹೇಳಿದ್ದನ್ನೇ ಪುನಃ ಹೇಳುವ ಸಂಭವವುಂಟು ಅದಕ್ಕೆ ಈಗ ಸ್ವಲ್ಪ ಹೆಚ್ಚು ಕಾಲ ಕೊಟ್ಟರೆ ಒಳ್ಳೆಯದು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ನಾನು ಈ ರಾಜ್ಯದ ಆಡಳಿತ ಭಾಷೆ ಕಡ್ಡಾಯವಾಗಿ ಕನ್ನಡ ಆಗಬೇಕು ಎನ್ನುವ ಬಗ್ಗೆ ಹೇಳಿದಂಥ ಕೆಲವು ಶಬ್ದಗಳನ್ನು ವಿಸ್ತರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಮಸೂದೆ ಮಾನ್ಯ ಸದಸ್ಯರಾದ ಎಸ್. ಎಂ. ಕೃಷ್ಣ ಅವರು ಹೇಳಿದ ಹಾಗೆ ಸರಳ ಮತ್ತು ಸುಂದರವಾಗಿಲ್ಲ. ಅವರಿಗೆ ಹಾಗೆ ಕಂಡಿದ್ದರೆ ನನಗೆ ಕಾಂಚನ ಮೃಗದ ರೂಪದಲ್ಲಿ ಇರುವ ಮಾರೀಚನ ಹಾಗೆ ಇದು ಕಾಣುತ್ತಾ ಇದೆ. ಈ ವಿಷಯವನ್ನು ವಿಮರ್ಶೆ ಮಾಡುವುದು ಒಳ್ಳೆಯದು. ಇದರೊಳಗೆ ಹೇಗೆ ಆ ದೃಷ್ಟಿ ಕಾಣುತ್ತದೆ ಎಂದು ನನ್ನ ಅಭಿಪ್ರಾಯವನ್ನು ನಾನು ಸಭೆಯ ಮುಂದೆ ಇಡುತ್ತೇನೆ. ತಾವು ಇದನ್ನು ದಯವಿಟ್ಟು ಓದಬೇಕು, ಓದಿದ್ದೀರಿ ಎಂದು ಭಾವಿಸುತ್ತೇನೆ. ಇದರಲ್ಲಿ ಒಂದು ಮಾತು–ಕನ್ನಡದಲ್ಲಿ ಓದುತ್ತೇನೆ–2ನೇ ಪ್ರಕರಣ ಎಂದು ಕರೆಯುತ್ತೇವೆ–ಕ್ಲಾಸ್ ಅನ್ನುವುದನ್ನು ಪ್ರಕರಣ ಎಂದು ಕನ್ನಡಿಸಿದ್ದಾರೆ ಅದು ಬೇರೆ ಮಾತು–2ನೇ ಪ್ರಕರಣದಲ್ಲಿ 'ಕನ್ನಡವು ಮೈಸೂರು ರಾಜ್ಯದ ರಾಜ ಭಾಷೆಯಾಗಿರತಕ್ಕದ್ದು' ಎಂಬುದನ್ನು ಬಿಟ್ಟರೆ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯಾಗಿ ಮಾಡುವುದಕ್ಕೆ ಇನ್ನಾವ ಪ್ರಕರಣವೂ ಸಹಕಾರಿಯಾಗಿಲ್ಲ. ತಾವು ಇದನ್ನು ದಯವಿಟ್ಟು ಓದಬೇಕು 3-4-5-6 ಪ್ರಕರಣಗಳು ಇವೆ. ಅವು ಈ 2ನೇ ಪ್ರಕರಣದಲ್ಲಿ ಕೊಡತಕ್ಕ ಅಧಿಕಾರವನ್ನು ಮೊಟಕು ಮಾಡತಕ್ಕವು ಅಥವಾ ಅಡ್ಡಿ ಪಡಿಸತಕ್ಕವು ಅಥವಾ ವಿಫಲಗೊಳಿಸತಕ್ಕವು ಎಂಬುದನ್ನು ನಾವು ಅವನ್ನು ಓದುವುದರಿಂದ ಕಂಡುಕೊಳ್ಳಬಹುದು. ಆ ದೃಷ್ಟಿಯಿಂದಲೂ ಕನ್ನಡ ಆಡಳಿತ ಭಾಷೆಯಾಗುತ್ತದೆ ಅನ್ನುವ ರೂಪದಲ್ಲಿ ಇಂಗ್ಲೀಷನ್ನು 1965ನೇ ಇಸವಿಯಿಂದ ಆಚೆಗೂ ಮುಂದುವರಿಸಿಕೊಂಡು ಹೋಗುವುದಕ್ಕೆ ಯಾವ ಅಭ್ಯಂತರವೂ ಕಾನೂನು ದೃಷ್ಟಿಯಿಂದ ಇರತಕ್ಕದ್ದಲ್ಲ ಎಂಬ ಕಾರಣಕ್ಕಾಗಿಯೇ ತಂದಿರತಕ್ಕ ಮಸೂದೆ ಇದು ; ಎನ್ನುವುದು ಇಲ್ಲಿ ಗಮನಿಸಬೇಕಾದ ವಿಷಯ. ಆದ್ದರಿಂದ ಮಾನ್ಯ ಶ್ರೀ ಕೃಷ್ಣರವರನ್ನು ಕೇಳಿಕೊಳ್ಳುವುದಿಷ್ಟೆ: ಇದು ಅಷ್ಟು ಸರಳ ಮತ್ತು ಸುಂದರವಾದ ಮಸೂದೆ ಅಲ್ಲ. ಈಗ ಏನು ಸರಕಾರದ ಧೋರಣೆ ಭಾಷೆಯ ಬಗ್ಗೆ ಇದೆಯೋ ಆ ಧೋರಣೆಯನ್ನೇ ಯಾವ ಅಡ್ಡಿ ಆತಂಕ ಇಲ್ಲದೆ ಮುಂದುವರಿಸಿಕೊಂಡು ಹೋಗುವುದಕ್ಕೆ ಕಾನೂನು ಬದ್ಧವಾಗಿ ಅಧಿಕಾರವನ್ನು ಈ ಸಭೆ ಸರಕಾರದವರಿಗೆ ಕೊಡಬೇಕೆಂದು ಕೇಳುತ್ತಾ ಇದ್ದಾರೆ. ಮಾನ್ಯ ಮುಖ್ಯ ಸಚಿವರು ಹೇಳಿದ ಹಾಗೆ ಪ್ರಧಾನಿ ಅವರು ಹೇಳಿದ್ದಾರೆ–1965ರ ನಂತರವೂ ಇಂಗ್ಲೀಷನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಅವರು ಈ ದೇಶದ ಜನರಿಗೆ ಭರವಸೆ ಕೊಟ್ಟಿದ್ದಾರೆ ಆ ಭರವಸೆಯನ್ನು ಈಡೇರಿಸುವುದಕ್ಕೆ ಈ ಮಸೂದೆ ಎನ್ನುವುದು ಬಹಳ ಸುಸ್ಪಷ್ಟ. ಆದುದರಿಂದ ನಾನು ಈ ಮಸೂದೆಗೆ ತಿದ್ದುಪಡಿ ಸೂಚಿಸಿದ್ದೆ, ಅದರ ಪ್ರಕಾರ ಏನು ಹೇಳುತ್ತೇನೆ ಎಂದರೆ–ಬಹಳ ಸ್ಪಷ್ಟವಾಗಿ ಹೇಳಿದ್ದೇನೆ 2ನೇ ಪ್ರಕರಣವು ಸಾರ್ಥಕವಾಗಬೇಕಾದರೆ–ನಾವು ನೇರವಾಗಿ ಏನು ಹೇಳಬೇಕೆಂದರೆ–ಸ್ವಾತಂತ್ರ್ಯ ನಂತರವೂ ಮುಂದುವರಿದುಕೊಂಡು ಬಂದಂಥ ಇಂಗ್ಲೀಷ್ ಭಾಷೆಯ ಬಳಕೆಯನ್ನು 1965ನೇ ಇಸವಿಯಿಂದ ಆಚೆಗೆ ಮುಂದುವರಿಸಿಕೊಂಡು ಹೋಗದೇ ಇರುವುದಕ್ಕೆ ಮತ್ತು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ತಂದಿರತಕ್ಕ ಮಸೂದೆ ಇದು ಎಂದು ಹೇಳಿ ಇದನ್ನು ಕಾರ್ಯಗತ ಮಾಡುವುದಕ್ಕೆ ಏನು ಕ್ರಮಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ಈ ಮಸೂದೆಯ ಅಭಿಪ್ರಾಯವಾಗಿರಬೇಕು.

ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಕನ್ನಡ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ ಮಾಡಬೇಕೆಂದು ಹೇಳುವ ಕಾಲದಲ್ಲಿ ಅದನ್ನು ಕಾರ್ಯಗತ ಮಾಡದೇ, ಈಗ ಈ ಮಸೂದೆಯನ್ನು ಅಂಗೀಕರಿಸಿ ಇಂಗ್ಲೀಷ್ ಭಾಷೆಯನ್ನು ಸಾರೋದ್ಧಾರವಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ಈ ಮಸೂದೆಯಿಂದ ಅವಕಾಶವಾಗುತ್ತದೆ. ಮುಖ್ಯಮಂತ್ರಿಗಳು ಈ ಮಾತನ್ನು ಗಮನಿಸಿ ಸೂಕ್ತ ತಿದ್ದುಪಡಿಯನ್ನು ಅಂಗೀಕರಿಸುವುದಕ್ಕೆ ಸರಕಾರ ಮನಸ್ಸು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

2-30 P.M.

ಕನ್ನಡದಲ್ಲಿ ಇನ್ನೂ ಆಗಬೇಕಾದ ಕೆಲಸ ಬಹಳ ಇದೆ. ಇದನ್ನು ಅನೇಕ ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಒಂದು ವಿಷಯದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಾವು ಎಲ್ಲಾದಕ್ಕೂ ಮೊದಲು ಮನಸ್ಸು ಮಾಡಬೇಕು. ಏಕೆಂದರೆ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕುವುದು. ಕನ್ನಡದಲ್ಲಿ ಏನಾದರೂ ಹೇಳಿದರೆ ಅದಕ್ಕೆ ಅರ್ಥವೇ ಇಲ್ಲವೇನೋ ಎಂಬಂತೆ ಕೆಲವರ ಭಾವನೆ ಇದೆ. ಅಂಥವರು ಇಂಗ್ಲೀಷ್ ಭಾಷೆಯಿಂದಲೇ ಬೆಳೆದು, ಇಂಗ್ಲೀಷ್ ನೀರು ಕುಡಿದು, ಇಂಗ್ಲೀಷ್ ಊಟ ಮಾಡಿ ಅದರಲ್ಲಿಯೇ ಮಲಗುತ್ತಿರುವುದು ಬಹಳ ವಿಚಿತ್ರ ಸನ್ನಿವೇಶ. ಇದು ಸನ್ನಿವೇಶದ ತಪ್ಪು. ಅವರ ಮೇಲೆ ತಪ್ಪು ಆರೋಪಿಸುವುದಿಲ್ಲ. ಕಾಲಕ್ಕೆ ತಕ್ಕಹಾಗೆ ಅಂಥವರು ತಮ್ಮ ಮನೋಭಾವನೆ ಬದಲಾಯಿಸುವುದಿಲ್ಲವೇ ! ಅಂಥವರ ಬಗ್ಗೆ ನಾವು ಬಹಳ ವಿಷಾದ ಪಡಬೇಕಾಗಿದೆ. ಇವತ್ತು ಸರಕಾರದವರು ಯಾವದೇ ಒಂದು ವಿಷಯ ಬಂದರೂ ತುರ್ತುಪರಿಸ್ಥಿತಿಯನ್ನು ಮುಂದೆ ತರುತ್ತಿದ್ದಾರೆ. ಆದರೆ ಮಂತ್ರಿಮಂಡಳವನ್ನು ಸಣ್ಣದು ಮಾಡಬೇಕೆಂಬ ವಿಷಯ ಬಂದಾಗ್ಗೆ ಮಾತ್ರ ಈ ತುರ್ತುಪರಿಸ್ಥಿತಿ ಅವರ ಮುಂದೆ ಬರುವುದಿಲ್ಲ. ಕನ್ನಡದಲ್ಲಿ ಶಬ್ದಕೋಶ, ವಿಶ್ವಕೋಶ ಸಿದ್ಧಮಾಡತಕ್ಕದ್ದು ಇದೆ. ಇದು ಸಂಪೂರ್ಣವಾಗಿ ನಿಂತಿದೆ. ಆ ರೀತಿ ಮಾಡದೆ, ಅದಕ್ಕೆ ಹಣ ಒದಗಿಸಬೇಕು. ತುರ್ತುಪರಿಸ್ಥಿತಿ ಮುಂದೆ ಮಾಡಿ ಕೆಲಸ ಕುಂಠಿತಗೊಳಿಸಬಾರದು. ಟೈಪ್‌ರೈಟರ್ ವಿಷಯವೂ ಅಷ್ಟೇ. ಹೀಗೆ ಅನೇಕ ಸಾಧನೆಗಳನ್ನು ಸರಕಾರ ಸಿದ್ಧಮಾಡಬೇಕಾಗಿದೆ. ಟೆಕ್ಸ್ಟ್‌ಬುಕ್ ವಿಷಯವೂ ಇದೆ. ಇದರಲ್ಲಿ ವ್ಯಾಪಾರದ ದೃಷ್ಟಿಗೆ ಅವಕಾಶ ಕೊಡಬಾರದು. ನಮ್ಮ ಕನ್ನಡ ರಾಜ್ಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ಪ್ರೌಢ ವಿದ್ಯಾಭ್ಯಾಸ, ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಕನ್ನಡ ಮಾಧ್ಯಮದ ಮೂಲಕವೇ ಆಗಬೇಕು ಎಂಬುದು ನಮ್ಮ ಆಶಯ. ಈ ತತ್ವವನ್ನು ಎಲ್ಲ ಭಾಷಾ ತಜ್ಞರೂ ಒಪ್ಪುತ್ತಾರೆ. ಮಾತೃಭಾಷೆಯಲ್ಲಿ ಆಗುವಷ್ಟು ವಿಷಯ ಸಂಗ್ರಹಣೆ ಬೇರೆ ಭಾಷೆಯಲ್ಲಿ ಆಗುವುದು ಸಾಧ್ಯವಿಲ್ಲ. ಆದುದರಿಂದ ಇದನ್ನು ಮೊದಲು ಕಾರ್ಯಗತ ಮಾಡಬೇಕಾಗಿದೆ. ಇದುವರೆಗೆ ಆಗದೇ ಇರುವುದು ನಮ್ಮ ದುರದೃಷ್ಟ. ಶ್ರೀ ಕೆ. ವಿ. ಪುಟ್ಟಪ್ಪನವರು ವಿಶ್ವವಿದ್ಯಾನಿಲಯದ ವೈಸ್‌ಚಾನ್ಸಲರ್ ಆಗಿದ್ದಾಗ್ಗೆ ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕು ಎಂದು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದರು. ಶ್ರೀಮತಿ ನಾಗರತ್ನಮ್ಮನವರು ಮೈಸೂರು ಮಹಾರಾಣಿ ಕಾಲೇಜ್ ಬಗ್ಗೆ ಒಂದು ಮಾತನ್ನು ಹೇಳಿದರು. 12 ಜನ ವಿದ್ಯಾರ್ಥಿನಿಯರು ಕನ್ನಡ ಮಾಧ್ಯಮದ ಮೂಲಕ ಪರೀಕ್ಷೆಗೆ ಕುಳಿತ ಎಲ್ಲರೂ ಬೀ.ಎ. ಪಾಸ್ ಆಗಿದ್ದಾರೆ. ಕನ್ನಡ ಮಾಧ್ಯಮ ತೆಗೆದುಕೊಂಡವರಿಗೆ ಶಿಕ್ಷಣ ಮುಂದುವರಿಸಲು ಅವಕಾಶ ಇಲ್ಲದ ಮೂಲಕ ಬೇರೆ ಕಡೆ ಕಳಿಸುವುದಕ್ಕೆ ಒತ್ತಾಯ ತಂದಿದ್ದಾರೆಂದು ಕೇಳಿದ್ದೇನೆ. ಈ ರೀತಿ ಮಾಡುವುದರಿಂದ ಕನ್ನಡಕ್ಕೆ ದ್ರೋಹ ಮಾಡಿದಂತಾಗುತ್ತದೆ. ಕೆಲವು ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸುತ್ತಿದ್ದಾರೆ. ಇದು ಸರಿಯಲ್ಲ. ಈ ರೀತಿ ಆತಂಕ ಒಡ್ಡುವುದು ಸರಿಯಲ್ಲ. ಕನ್ನಡ ಭಾಷೆಗೆ ಕನ್ನಡ ಜನರಿಗೆ ದ್ರೋಹ ಬಗೆದು ಕೆಟ್ಟತನ ಮಾಡುತ್ತಿದ್ದಾರೆಂದು ಬಹಳ ವ್ಯಸನದಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹೀಗಿರುವಾಗ ಸರಕಾರ ಕಣ್ಣುಮುಚ್ಚಿ ಕುಳಿತುಕೊಳ್ಳಬಾರದು.

ಇನ್ನು ಪಠ್ಯಪುಸ್ತಕಗಳ ವಿಚಾರವಾಗಿ ಅನೇಕರು ಹೇಳಿದರು. ಇಂತಹ ಪಠ್ಯಪುಸ್ತಕಗಳ ಬಗ್ಗೆ ನಾವು ಇನ್ನೂ ಅನೇಕ ವಿಷಯಗಳನ್ನು ವಿಚಾರ ಮಾಡಬೇಕಾಗಿದೆ. ಯಾವ ತರಹದ ಪಠ್ಯಪುಸ್ತಕಗಳನ್ನಿಡಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಶ್ರೀಮಾನ್ ಮುಕ್ಕಣ್ಣಪ್ಪನವರು ಹಿಂದೆ ಒಂದು ಇಂಗ್ಲೀಷ್ ಚರಿತ್ರೆ ಪುಸ್ತಕವನ್ನು ತಂದು ಇಲ್ಲಿ ಓದಿದ್ದರು. ಇಂತಹ ಚರಿತ್ರೆಗಳೂ ಇರುತ್ತವೆ. ಈ ಸಂದರ್ಭದಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕಾದರೆ ನಮ್ಮ ಪ್ರೈಮರಿ ವಿದ್ಯಾಭ್ಯಾಸದಿಂದ ಪ್ರೌಢ ವಿದ್ಯಾಭ್ಯಾಸದಿಂದ ವಿಶ್ವವಿದ್ಯಾನಿಲಯದ ವರೆಗೆ ಕನ್ನಡ ಮಾಧ್ಯಮವೇ ಇರಬೇಕಾದುದು ಅತ್ಯಾವಶ್ಯಕ, ಇದಕ್ಕೆ ಪೂರ್ಣ ಬೆಂಬಲವನ್ನು ಎಲ್ಲರೂ ಕೊಡಬೇಕು. ಹಾಗಿಲ್ಲದೆ ಹೋದರೆ ಈ ಉದ್ದೇಶವನ್ನು ಸಾಧನೆ ಮಾಡಿದಂತಾಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಹೇಳಿ ಈ ಮಸೂದೆಯಲ್ಲಿ ಹೇಳಿರುವಂತೆ ಕನ್ನಡವನ್ನು ಆಡಳಿತ ಭಾ-

(ಶ್ರೀ ಎಸ್. ಗೋಪಾಲಗೌಡ)

ಯಾಗಿ ಮಾಡುವುದಕ್ಕೆ ಮತ್ತು ಕನ್ನಡದಲ್ಲಿಯೇ ನಮ್ಮ ರಾಜ್ಯದಲ್ಲಿ ಶಿಕ್ಷಣ ದೊರೆಯುವಂತೆ ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಪತಿಗಳೇ, ಕನ್ನಡ ನಾಡಿನ ಮುಖ್ಯಮಂತ್ರಿಗಳು ನಮ್ಮ ಮುಂದೆ ಇಟ್ಟಿರುವ ಕನ್ನಡವನ್ನು ರಾಜಭಾಷೆಯಾಗಿ ಮಾಡಬೇಕೆನ್ನುವ ಮಸೂದೆಯನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಮತ್ತು ಹೃತ್ಪೂರ್ವಕವಾಗಿಯೂ ಸ್ವಾಗತಿಸುತ್ತೇನೆ. ಈ ಮಸೂದೆ ತಡವಾಗಿ ಬಂತು ಎನ್ನುವುದಕ್ಕೆ ಬದಲಾಗಿ ನಮ್ಮ ಮುಖ್ಯ ಮಂತ್ರಿಗಳು ಬಂದ ಅಲ್ಪಾವಧಿಯಲ್ಲೇ ಈ ಮಸೂದೆಯನ್ನು ತಂದುದಕ್ಕಾಗಿ ನಾನು ಸಂತೋಷದಿಂದ ಅವರನ್ನು ಅಭಿನಂದಿಸುತ್ತೇನೆ.

ಈ ಮಸೂದೆಯಲ್ಲಿ ಹೇಳಿರುವಂತೆ ಹಂತ ಹಂತವಾಗಿ ಇದನ್ನು ಜಾರಿಗೆ ತರಬೇಕೆಂದು ಇಲ್ಲಿ ಸೇರಿಸಿರುವುದು ಸರಿಯಾಗಿದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಒಂದೇ ಸಲ ಜಾರಿಗೆ ಇದನ್ನು ತರಬೇಕೆಂದರೆ ಬಹಳ ಕಷ್ಟವಾಗುತ್ತದೆ. ಕನ್ನಡದ ಅಭಿಮಾನಕ್ಕಾಗಿ ಕನ್ನಡದಲ್ಲಿಯೇ ಎಲ್ಲ ಮಾತನಾಡಬೇಕು ಎಂದು ಮಾತನಾಡುವಾಗ ಎಷ್ಟೋ ಸಂದರ್ಭಗಳಲ್ಲಿ ಆಂಗ್ಲ ಭಾಷೆಯೂ ತಾನೇತಾನಾಗಿ ಒಂದುಸಲ ಬರುತ್ತದೆ. ಅದುದರಿಂದ ಒಂದೇ ಸಾರಿ ಇದನ್ನು ಜಾರಿಗೆ ತರುವುದಕ್ಕಿಂತ ಹಂತ ಹಂತವಾಗಿ ತರುವುದು ಒಳ್ಳೆಯದು.

ಇನ್ನು ಕನ್ನಡ ಟೈಪ್‌ರೈಟರುಗಳು ಬಂದಿದ್ದರೂ ಇನ್ನೂ ನ್ಯಾಗಿ ಬಳಕೆಗೆ ಬಂದಿಲ್ಲ. ಕನ್ನಡ ಟೈಪರೈಟರುಗಳೇನೋ ಎಲ್ಲಕಡೆಗೂ ಬಂದಿವೆ. ಕೆಲವು ತಾಲ್ಲೂಕು ಬೋರ್ಡುಗಳಿಗೂ ಬಂದಿರುವುದನ್ನು ನೋಡಿದ್ದೇನೆ. ಆದರೆ ಅದರ ಉಪಯೋಗ ಸರಿಯಾಗಿ ಆಗುತ್ತಿಲ್ಲ. ಇದಕ್ಕೆ ಕಾರಣವೇನು ಎಂದರೆ ಕನ್ನಡ ಟೈಪ್‌ರೈಟರನ್ನು ಕಲತ ಜನ ದೊರಕದೇ ಇರುವುದು. ಇದಕ್ಕೋಸ್ಕರ ಕನ್ನಡ ಟೈಪ್‌ರೈಟರನ್ನು ಕಲಿಸುವಂತಹ ತರಬೇತಿ ಕೇಂದ್ರವೊಂದನ್ನು ಸರಕಾರದವರೇ ತೆರೆದರೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ನನ್ನ ಒಂದು ಸಲಹೆ ಇದೆ. ಗಂಡಸರಿಗಿಂತ ಹೆಚ್ಚಾಗಿ ಎಸ್.ಎಸ್.ಎಲ್.ಸಿ. ಆಗಿರತಕ್ಕಂತಹ ಎಷ್ಟೋ ಹೆಣ್ಣುಮಕ್ಕಳು ಕೆಲಸವಿಲ್ಲದೆ ತಿರುಗಾಡುತ್ತಿದ್ದಾರೆ. ಇಂತಹ ಕೇಂದ್ರವೊಂದನ್ನು ತೆರೆದು ಇಲ್ಲಿ ಕನ್ನಡ ಟೈಪ್‌ರೈಟಿಂಗು ಬಗ್ಗೆ ತರಬೇತಿ ನೀಡಿದರೆ ಇಂತಹ ಹೆಣ್ಣುಮಕ್ಕಳು ಕಲಿಯಲು ಸಹಾಯವಾಗುತ್ತದೆ. ಇಂತಹ ಒಂದು ಕೇಂದ್ರವನ್ನು ಸರಕಾರ ತೆರೆಯಬೇಕೆಂದು ನನ್ನ ಸಲಹೆ.

ಕನ್ನಡ ಟೈಪ್‌ರೈಟರು ಯಂತ್ರವನ್ನು ಇನ್ನೂ ಎಷ್ಟೋ ಜನರು ತಯಾರಿಸಿದ್ದಾರೆ. ಅವೆಲ್ಲವನ್ನೂ ಪರಿಶೀಲಿಸಿ ಇಂತಹ ಕನ್ನಡ ಟೈಪ್‌ರೈಟರು ಯಂತ್ರಗಳನ್ನು ತಯಾರಿಸಿರುವಂತಹವರೆಲ್ಲರಿಗೂ ಪ್ರೋತ್ಸಾಹ ಕೊಡಬೇಕಾದುದು ಅತ್ಯವಶ್ಯಕ ಎಂದು ನನ್ನ ವಿನಂತಿ. ಒಟ್ಟಿನಲ್ಲಿ ಈ ಕನ್ನಡ ರಾಜಭಾಷೆಯ ಮಸೂದೆಗೆ ಒಬ್ಬಿಬ್ಬರು ಹೊರತಾಗಿ ಎಲ್ಲರೂ ಬೆಂಬಲ ನೀಡಿದ್ದಾರೆ. ಇದನ್ನು ಅನುಮೋದಿಸಿ ಎಲ್ಲರೂ ಒಮ್ಮತದಿಂದ ತಮ್ಮ ಅನುಮೋದನೆಯನ್ನು ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

†ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದ್ರಿ) —ಮಾನ್ಯ ಅಧ್ಯಕ್ಷರೇ, ಇದು ಒಂದು ಮಹತ್ವವಾದ ಮಸೂದೆಯಾಗಿದ್ದರೂ ಇದರೊಳಗಿರುವ ವಿವರಣೆಗಳು ಸರಿಯಾಗಿ ಕಾಣುತ್ತಿಲ್ಲವೆಂದುಅನೇಕರು ಈಗಾಗಲೇ ಹೇಳಿದ್ದಾರೆ. ಮುಖ್ಯವಾಗಿ ಇದರೊಳಗೆ ಹೇಳಿರುವಂತೆ 1965ರ ನಂತರವೂ ಇಂಗ್ಲಿಷನ್ನು ನ್ಯಾಯವಿಧಾಯಕ ಸಭೆಗಳಲ್ಲಿ ಬಳಸಬಹುದು ; ಘಟನೆಯ 210 ನೆಯ ಅನುಚ್ಛೇದದ ಪ್ರಕಾರ ಆಡಳಿತದ ಅನುಕೂಲಕ್ಕೋಸ್ಕರ ಮಾಡಬಹುದು ಎಂಬುದನ್ನು ಈ ಮಸೂದೆಯಲ್ಲಿ ತಂದಿದ್ದಾರೆನ್ನುವುದು ಇದರಿಂದ ಭಾಸವಾಗುತ್ತದೆ. ಅದು ಕನ್ನಡದ ಮಟ್ಟಿಗೆ ರಾಜ್ಯ ಭಾಷೆಯಾಗುವ ವಿಚಾರದಲ್ಲಿ ಯಾವ ಎರಡು ಅಭಿಪ್ರಾಯವೂ ಇಲ್ಲ. ಅದಕ್ಕೆ ಸರ್ವರೂ ಒಮ್ಮತದ ತೀರ್ಮಾನವನ್ನು ಈ ಅಧಿವೇಶನದಲ್ಲಿ ಕೊಡಬಹುದು ಮತ್ತು ಈ ರಾಜ್ಯದಲ್ಲಿಯೂ ಅಂಗೀಕರಿಸಬಹುದು. ಇನ್ನುಳಿದ ಎರಡು ವಿಚಾರಗಳನ್ನು ನಾವು ಇಲ್ಲಿ ನೋಡಬೇಕಾಗಿದೆ. ಒಂದು ಹಿಂದಿಯನ್ನು ನಮ್ಮ ರಾಷ್ಟ್ರ ಭಾಷೆಯಾಗಿ ತರುವುದು, ಇನ್ನೊಂದು ಇಂಗ್ಲಿಷ್‌ಭಾಷೆಯನ್ನುಳಿಸಿಕೊಂಡು ಬರುವುದು. ಇದರಲ್ಲಿ ಹಿಂದಿ ಭಾಷೆಯು ರಾಷ್ಟ್ರಭಾಷೆಯಾಗುವ ಅಗತ್ಯವಿದೆ. ಇಂಗ್ಲಿಷ್ ಭಾಷೆ ಎನ್ನುವುದು ನಮ್ಮ ದೇಶದಲ್ಲಿ ಸುಮಾರು ಇನ್ನೂರು ವರ್ಷಗಳಿಂದಲೂ ಜನರ ಬಳಕೆಯಲ್ಲಿದ್ದಂತಹ ಭಾಷೆ. ಇದು ಜನರ ಉಪಯೋಗದಲ್ಲಿದೆ. ಆದರೆ ನಾವು ಕನ್ನಡವನ್ನು ರಾಜಭಾಷೆಯಾಗಿ ಮಾಡಲಿಕ್ಕೆ ಈಗ ತಯಾರಾಗಿದ್ದೇವೆ. ನಿಜವಾಗಿಯೂ ಹೆಚ್ಚಿನ ಜನರು ಮಾತನಾಡತಕ್ಕ ಭಾಷೆ ಕನ್ನಡವಾಗಿದ್ದರೂ ಅದನ್ನು ಜಾರಿಗೆ ತರಲು ಕೈಗೊಳ್ಳಬೇಕಾದ ಮುಂಜಾಗರೂಕತೆಯ ಕ್ರಮಗಳನ್ನು ಮಾಡಿಲ್ಲ ಎಂದು ಹೇಳಿರು

ವುದು ನಮ್ಮಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಅನೇಕರು ಕನ್ನಡಿಗರಾಗಿ ಹುಟ್ಟಿ ಕನ್ನಡ ಭಾಷೆಯನ್ನೂ ಕಲಿತು ಕನ್ನಡ ರಾಜ್ಯದಲ್ಲಿ ಬೆಳೆದವರಾಗಿದ್ದರೂ ಕೂಡ ಇವೊತ್ತಿಗೂ ಇಂಗ್ಲಿಷು ಭಾಷೆಯನ್ನೇ ಉಪಯೋಗ ಮಾಡುತ್ತಿದ್ದಾರೆ. ಕನ್ನಡ ಭಾಷೆಯನ್ನು ತಿಳಿದವರಾಗಿದ್ದರೂ ಕನ್ನಡ ಭಾಷೆಯ ಉಪಯೋಗ ಮಾಡದೆ ಪರ ಭಾಷೆಯ ಗುಲಾಮರಾಗಿರುವುದು ಸರಿಯಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಬಗ್ಗೆ ಈ ಮಸೂದೆಯಲ್ಲಿ ಏನೂ ಅವಕಾಶ ಮಾಡಿಲ್ಲ. ಇಂಗ್ಲಿಷು ಬೇರೆ ರಾಷ್ಟ್ರದ ಭಾಷೆ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಮಸೂದೆಯನ್ನು ಮಾಡುವಾಗ ನಾವು ಒಮ್ಮತದ ಅಂಗೀಕಾರವನ್ನು ಕೊಡಬೇಕು. ಅಲ್ಲದೆ ಇಂಗ್ಲಿಷನ್ನು ಕಲಿತರ ಅಂತರರಾಷ್ಟ್ರೀಯ ಭಾಷೆಗಳನ್ನು ಕಲಿತುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುವುದನ್ನೂ ಎಲ್ಲರೂ ಒಪ್ಪಬೇಕಾದ ವಿಚಾರ. ಇದಕ್ಕಾಗಿ ಕಡ್ಡಾಯವಾಗಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಬೇಕು ಎಂದು ಈಗ ತಂದಿರುವುದನ್ನು ನಾವೆಲ್ಲರೂ ಒಪ್ಪಬೇಕು, ಎಂದು ಹೇಳುವಾಗ ದಕ್ಷಿಣದ ಜನರು ಇದಕ್ಕೆ ಪ್ರತಿಭಟನೆ ಮಾಡಲಿಕ್ಕೆ ಕಾರಣವೇನು ಎಂದರೆ ಉತ್ತರದವರಿಗೆ ದೊರಕುತ್ತಿರುವ ಸೌಲಭ್ಯಗಳು ದಕ್ಷಿಣದವರಿಗೆ ಸಿಕ್ಕುತ್ತಿಲ್ಲ ಮತ್ತು ಅವರ ಹಿತರಕ್ಷಣೆಯಾಗುತ್ತಿಲ್ಲ ಎನ್ನುವುದು. ಇದಕ್ಕಾಗಿ ಅವರು ತಮ್ಮ ವಿರೋಧಾಭಿಪ್ರಾಯವನ್ನು ಸೂಚಿಸಿದ್ದಾರೆ. ಈಗ ನಮ್ಮ ರಾಜ್ಯದಲ್ಲೇ ಐ.ಎ.ಎಸ್. ಪದವಿಯನ್ನು ಪಡೆದ ಎಷ್ಟು ಅಧಿಕಾರಿಗಳು ಇದ್ದಾರೆಯೋ ಅವರುಗಳು ಎಷ್ಟರಮಟ್ಟಿನ ವಿದ್ವತ್ತನ್ನು ಹಿಂದಿಯಲ್ಲಾಗಲೀ ಕನ್ನಡದಲ್ಲಿಯಾಗಲೀ ಪಡೆದಿದ್ದಾರೆ ಎನ್ನುವುದನ್ನು ವಿಚಾರ ಮಾಡಬೇಕು. ಸರಕಾರದವರು ಈ ಅಧಿಕಾರಿಗಳನ್ನು ಕಡ್ಡಾಯವಾಗಿ ರಾಷ್ಟ್ರಭಾಷೆಯಾಗುವ ಹಿಂದಿ ಭಾಷೆಯನ್ನು ಕಲಿತು ಪ್ರಾವೀಣ್ಯತೆಯನ್ನು ಪಡೆಯಬೇಕು ಎನ್ನುವ ನಿಯಮವನ್ನು ಹಾಕಬೇಕು. ಇದೇ ರೀತಿ ಉತ್ತರ ಹಿಂದೂಸ್ಥಾನದಲ್ಲಿ ಇರತಕ್ಕ ಐ.ಸಿ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಿಗೆ ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯುವುದರ ಜೊತೆಗೆ ದಕ್ಷಿಣದ ಭಾಷೆಗಳಾದ ತಮಿಳು, ಮಲೆಯಾಳ, ತೆಲುಗು, ಕನ್ನಡ ಇವುಗಳಲ್ಲಿಯೂ ಉನ್ನತ ಪರೀಕ್ಷೆಗಳನ್ನು ಕಡ್ಡಾಯವಾಗಿ ಪಾಸು ಮಾಡಬೇಕೆಂದು ವಿಧಿಸಬೇಕು. ಇದರ ಬಗ್ಗೆ ನಮ್ಮ ದಕ್ಷಿಣ ಮುಖಂಡರು ಪ್ರತಿಭಟನೆಯನ್ನು ಸಲ್ಲಿಸುತ್ತಿದ್ದಾರೆಯೇ ಎನ್ನುವುದರ ಕಡೆಗೂ ಸರಕಾರ ಗಮನಿಸಬೇಕು.

ಇದನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದು ಉತ್ತರ ಹಿಂದೂಸ್ಥಾನದ ಜನರಲ್ಲಿ ಉನ್ನತ ಪದವಿಗೆ ಹೋಗತಕ್ಕವರು ದಕ್ಷಿಣ ಹಿಂದೂಸ್ತಾನದ ಭಾಷೆಯಲ್ಲಿ ಯಾವುದಾದರೂ ಒಂದು ಪರೀಕ್ಷೆಯನ್ನು ಪಾಸು ಮಾಡಬೇಕು ಎಂದು ಅವರ ಮೇಲೆ ಒಂದು ಒತ್ತಾಯವನ್ನು ಹಾಕಬೇಕು. ಅವರು ನಮಗೆ ಹೇಗೆ ಹಿಂದಿಯನ್ನು ಬೆಳೆಸಬೇಕು, ಹಿಂದಿಯನ್ನು ಕಲಿಯಬೇಕು ಎಂದು ಒತ್ತಾಯ ಮಾಡುತ್ತಾರೆಯೋ ಅದೇ ರೀತಿ ಅವರು ನಾಳೆ ಇಲ್ಲಿಗೆ ಡೆಪ್ಯುಟಿ ಕಮೀಷನರಾಗಿಯೋ ಅಥವಾ ಇನ್ನು ಯಾವುದಾದರೂ ಒಂದು ಉನ್ನತ ಪದವಿಗೆ ಬಂದಾಗ ಅವರು ಇಲ್ಲಿಯ ರಾಜ್ಯಭಾಷೆಯನ್ನು ತಿಳಿದುಕೊಳ್ಳಲು ಶಕ್ತರಾಗಬೇಕು. ಆ ರೀತಿ ಪರಸ್ಪರ ಒಂದು ಒಪ್ಪಂದವನ್ನು ಕೇಂದ್ರ ಸರ್ಕಾರದವರೊಡನೆ ನಮ್ಮ ಸರ್ಕಾರ ಮಾಡಿಕೊಳ್ಳಬೇಕು. ಆ ರೀತಿ ಮಾಡದೆ ಕೇವಲ ದಕ್ಷಿಣದವರ ಮೇಲೆ ಹಿಂದಿ ರಾಷ್ಟ್ರಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು ಎನ್ನುವಂತ ಹೊರೆಯನ್ನು ಹೊರಿಸುವುದಾದರೆ ಸಾಮಾನ್ಯ ಜನರಿಗೆ ಹಿಂದಿಯನ್ನು ಕಲಿಯುವುದಕ್ಕೆ ಬಹಳ ಕಷ್ಟವಾಗುತ್ತದೆ. ಹಾಗೆಂದ ಮೇಲೆ ಹಿಂದಿಯ ವಿಷಯದಲ್ಲಿ ನಮಗೆ ಅಭಿಮಾನವಿಲ್ಲ ಎಂದಲ್ಲ. 1932ನೇ ಇಸವಿಯಲ್ಲಿ ಹಿಂದಿ ಪ್ರಾಥಮಿಕ ಪರೀಕ್ಷೆಗೆ ಕುಳಿತು ಫೇಲಾಗಿದ್ದವರ ಪೈಕಿ ನಾನೂ ಒಬ್ಬ. ಆದ್ದರಿಂದ ಹಿಂದಿ ಭಾಷೆಯ ವಿಷಯದಲ್ಲಿ ನನಗೂ ಅಭಿಮಾನ ಉಂಟು. ಆದರೆ ಅದಕ್ಕೆ ಸರಿಯಾಗಿ ಹೊಂದಿಕೊಂಡು ಅದರಲ್ಲಿ ಸರಿಯಾದ ಅನುಭವವನ್ನು ಪಡೆಯುವುದಕ್ಕೆ ನನಗೆ ಕಷ್ಟವಾಯಿತು. ಹೀಗಿರುವಾಗ ಇವೊತ್ತು ಇದೇ ಕಷ್ಟವನ್ನು ನಮ್ಮ ಮಕ್ಕಳು ಅನುಭವಿಸಬಾರದು. ಸರ್ಕಾರದ ಒಂದು ಗುಂಪಿನವರಾಗಲೀ ಅಥವಾ ಮುಖಂಡರಾಗಲೀ ತಮಗೆ ಬೇಕಾದ ಸ್ಥಾನಮಾನಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕಾಗಿ ಉತ್ತರದವರು ಮಾಡತಕ್ಕಂಥ ಒತ್ತಾಯಗಳಿಗೆ ತಲೆ ಬಾಗಬಾರದು, ಒಪ್ಪಿಕೊಳ್ಳಬಾರದು. ನಮ್ಮ ದಕ್ಷಿಣ ಹಿಂದೂಸ್ಥಾನದವರ ಸರಿಯಾದ ಹಕ್ಕುಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಹೋರಾಟ ಮಾಡಬೇಕು. ಈ ವಿಷಯಗಳನ್ನೆಲ್ಲಾ ಈ ಮಸೂದೆಯಲ್ಲಿ ಸೇರಿಸಬೇಕು ಮತ್ತು ಅದನ್ನು ಪಾಸು ಮಾಡಿದಮೇಲೆ ಅದನ್ನು ಜಾರಿಗೆ ತರಬೇಕು. ಅದನ್ನು ಜಾರಿಗೆ ತರತಕ್ಕಂಥ ಶಕ್ತಿ ಸರ್ಕಾರದವರಿಗೆ ಇಲ್ಲದೆ ಹೋದರೆ ಅದನ್ನು ಏತಕ್ಕೆ ತರಬೇಕು ? ಈಗ ಸರ್ಕಾರದವರು ಅನೇಕ ಕಾಯಿದೆಗಳನ್ನು ಈ ಸಭೆಯ ಮುಂದೆ ತಂದು ಅವುಗಳನ್ನು ಪಾಸು ಮಾಡಿದ್ದರೂ ಕೂಡ ಅವು ಬರೀ ಪುಸ್ತಕದ ಬದನೇಕಾಯಿಗಳಾಗಿವೆಯೇ ಹೊರತು ಅವುಗಳನ್ನು ಜಾರಿಗೆ ತರತಕ್ಕಂಥ ಶಕ್ತಿ ಸರ್ಕಾರಕ್ಕಿಲ್ಲ ಎಂಬುದು ಜನಜನಿತವಾಗಿದೆ. ಈ ಮಸೂದೆಯಲ್ಲಿ ಕೇವಲ ಕನ್ನಡ ಭಾಷೆಗೆ ಮಾತ್ರ ಅಭಿಮಾನವಿದೆ; ಇತರ ಭಾಷೆಗಳಿಗೆ ಇದರಲ್ಲಿ ಅಭಿಮಾನವನ್ನು ತೋರಿಸಿದ ಹಾಗೆ ಕಾಣುವುದಿಲ್ಲ. ಆದ್ದರಿಂದ ಒಂದು ಸುಧಾರಿತವಾದ ರೀತಿಯಲ್ಲಿ ಕ್ರಮವಾದ ಒಂದು ಮಸೂದೆಯನ್ನು ತಂದು

(ಶ್ರೀ ಎಚ್. ಗೋಪಾಲ ಸಾಲೆನ್ನ)

ಆದರಲ್ಲಿ ಕನ್ನಡ ಭಾಷೆಯ ಮಹತ್ವ ಹಾಗೂ ರಾಷ್ಟ್ರಭಾಷೆಯ ಮಹತ್ವ ಇವುಗಳನ್ನು ಅಳವಡಿಸತಕ್ಕದ್ದು ಅವಶ್ಯ; ಅಂತಹ ಒಂದು ಅತ್ಯುತ್ತಮವಾದಂಥ ಮಸೂದೆಯನ್ನು ಈ ಸಭೆಯಲ್ಲಿ ತರುವುದು ಅಗತ್ಯ ಎಂದು ನಾನು ಸರ್ಕಾರಕ್ಕೆ ಸೂಚಿಸುತ್ತೇನೆ. ಇಷ್ಟುಮಾತ್ರವಲ್ಲ. ಕೇವಲ "ಕನ್ನಡದ ದೊಣ್ಣೆ" ಎಂದು ಎಲ್ಲರಿಗೂ ಹೊಡೆಯುವುದು ಸರಿಯಲ್ಲ. ನಿಜವಾಗಿಯೂ ಈ "ಕನ್ನಡದ ದೊಣ್ಣೆ" ಪ್ರತಿಯೊಂದು ಭಾಷೆಗೂ, ಅಲ್ಪಸಂಖ್ಯಾತರಿಗೂ ರಕ್ಷಣೆಯನ್ನು ಕೊಡ ತಕ್ಕಂಥ ದೊಣ್ಣೆಯಾಗಿರಬೇಕು. ಈ ನಮ್ಮ ರಾಜ್ಯದಲ್ಲಿ ಮರಾಠಿ, ತೆಲುಗು, ಮಲೆಯಾಳ, ತುಳು, ತಮಿಳು ಈ ರೀತಿ ನಾನಾ ಭಾಷೆಗಳನ್ನು ಮಾತನಾಡತಕ್ಕಂಥ ಅಲ್ಪ ಸಂಖ್ಯಾತ ಜನರಿದ್ದಾರೆ. ಅವರೆಲ್ಲರಿಗೂ ರಕ್ಷಣೆಯನ್ನು ಕೊಡಬೇಕು. ಇವೊತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಮಾತ ನಾಡತಕ್ಕಂಥವರು 5—6 ಲಕ್ಷಕ್ಕಿಂತ ಜಾಸ್ತಿ ಜನಗಳಿದ್ದಾರೆ. ಅವರಿಗೂ ಸಹ ರಕ್ಷಣೆ ದೊರೆಯ ಬೇಕು. ಈಗ ಅವರು ಕನ್ನಡ ಕಲಿಯಬೇಕು, ಇಂಗ್ಲೀಷು ಕಲಿಯಬೇಕು ಮತ್ತು ಹಿಂದಿಯನ್ನು ಕಲಿಯಬೇಕು. ಅವರೇನು ಬಿಟ್ಟುಹೋಗುವುದಿಲ್ಲ; ಸುಧಾರಿಸಿಕೊಂಡು ಹೋಗುತ್ತಾರೆ ನಮ್ಮ ದೇಶ ಒಂದಾಗಿ ಉಳಿಯಬೇಕು. ನಮ್ಮ ರಾಷ್ಟ್ರ ಒಂದಾಗಿ ಉಳಿಯಬೇಕು. ಎಲ್ಲರನ್ನೂ ಸುಧಾ ರಿಸಿಕೊಂಡು ಬಾಕಿ ಭಾಷೆಗಳಿಗೂ ಹೊಂದಿಕೊಂಡು ಹೋಗಬೇಕು. ಭಾಷಾವಾರು ಪ್ರಾಂತಗಳಾದ ಮೇಲೆ ನಮ್ಮ ರಾಷ್ಟ್ರದಲ್ಲಿ ಜನ ಸುಖವಾಗಿಲ್ಲ. ಇವೊತ್ತಿನ ದಿವಸ ಪ್ರತಿಯೊಂದು ಪ್ರಾಂತದಲ್ಲಿಯೂ ನಮ್ಮ ಒಂದು ಗ್ರಾಮ ಹೋಯಿತು, ನಮ್ಮ ಗಡಿ ಹೋಯಿತು ಎಂದು ಜನಗಳು ಜಗಳವಾಡುತ್ತಿ ದ್ದಾರೆ. ಸುಮಾರು 200 ವರ್ಷಗಳಿಂದಲೂ ಕನ್ನಡಿಗರು ಬೊಂಬಾಯಿ ಪ್ರಾಂತದಲ್ಲಿ ಸೇರಿ ಕೊಂಡಿದ್ದರು, ಮದ್ರಾಸಿನಲ್ಲಿ ಸೇರಿಕೊಂಡಿದ್ದರು. ಆಂಧ್ರ ಪ್ರಾಂತದಲ್ಲಿ ಸೇರಿಕೊಂಡಿದ್ದರು. ಇವೊತ್ತು ಎಲ್ಲರೂ ಒಟ್ಟುಗೂಡಿ ಒಂದು ರಾಜ್ಯವಾಗಿದೆ. ಕನ್ನಡಿಗರು, ಮಹಾರಾಷ್ಟ್ರದವರು, ಮಲೆಯಾಳಿಗಳು ಎಲ್ಲರೂ ಸೇರಿಕೊಂಡು ಏತಕ್ಕೆ ವಿಶ್ವಾಸವನ್ನು ಬೆಳೆಸಿಕೊಂಡು ಹೋಗಬಾರದು ಎಂಬ ಪ್ರಶ್ನೆಯನ್ನು ಆಲೋಚನೆ ಮಾಡಬೇಕು. ಆದ್ದರಿಂದ ನಾವು ಭಾಷಾದೃಷ್ಟಿಯಿಂದ ರಾಷ್ಟ್ರ ವನ್ನು ವಿಭಾಗ ಮಾಡತಕ್ಕಂಥ ಕಾರ್ಯಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಆಡಳಿತ ಪಕ್ಷಕ್ಕೆ ಕೋರಿಕೆಯನ್ನಿಟ್ಟು ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಹಾಕಿ ಇದನ್ನು ಸುಧಾರಿಸ ಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಾನ್ಯ ಸಭಾಪತಿಯವರೇ, ಈಗ ಈ ಸಭೆಯ ಮುಂದಿಟ್ಟಿರತಕ್ಕ ಮೈಸೂರು ರಾಜ್ಯದ ರಾಜಭಾಷೆಗೆ ಸಂಬಂಧಪಟ್ಟ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮೈಸೂರು ರಾಜ್ಯದ ಭಾಷೆ ಯಾವುದು ಎಂದು ಹೇಳಿದರೆ ಕನ್ನಡ. ಕನ್ನಡ ಭಾಷೆ ಬಹಳ ಸರಳವಾದದ್ದು. ಈ ದೇಶದಲ್ಲಿರತಕ್ಕ ಜನ ಕನ್ನಡ ಭಾಷೆಯಲ್ಲಿ ಹೆಚ್ಚಿನ ವ್ಯವಹಾರವನ್ನು ಮಾಡುತ್ತಿದ್ದಾರೆ. ಅದರಲ್ಲೂ ರೈತಾಪಿ ಜನಗಳು ಕನ್ನಡ ವನ್ನು ಹೆಚ್ಚಿಗೆ ಅಭ್ಯಾಸ ಮಾಡುವುದರಿಂದ ಈ ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಪರಿಶುದ್ಧ ವಾದ ಮತ್ತು ಸುಧಾರಿತವಾದ ಕನ್ನಡ ಭಾಷೆ ದೇಶದ ಆಡಳಿತ ಭಾಷೆಯಾಗುವುದು ಅಗತ್ಯ. ವಿಶಾಲ ಮನೋಭಾವದಿಂದ ಕನ್ನಡ ಪ್ರಾಂತದವರಾದ ನಾವು ಸೋದರ ಭಾಷೆಯಾದ ಮತ್ತು ಹಿಂದೂಸ್ಥಾನದಲ್ಲಿ ಅಧಿಕೃತವಾಗಿ ಒಪ್ಪಿಕೊಂಡಿರುವ ಎಲ್ಲಾ ಭಾಷೆಗಳಿಗೂ ಗೌರವ ಕೊಟ್ಟು ಅದರ ಮೇಲೆ ಕನ್ನಡವನ್ನು ಅಭಿವೃದ್ಧಿ ಮಾಡಬೇಕೆಂದು ನಮ್ಮ ಸಭಾನಾಯಕರು ಈ ಮಸೂದೆಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ನಾವು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕಾದದ್ದು ಬಹಳ ಪ್ರಾಮುಖ್ಯವಾದ ವಿಷಯ. ಹಿಂದೂಸ್ಥಾನದಲ್ಲಿ ಅನೇಕ ಭಾಷೆಗಳಿವೆ. ಅನೇಕ ಪ್ರಾಂತ ಗಳಿವೆ. ಹಿಂದೆ ಇಂಗ್ಲೀಷಿನವರು ನಮ್ಮ ದೇಶಕ್ಕೆ ಬಂದಾಗ, ಹಿಂದೂಸ್ಥಾನಕ್ಕೆ ಬಂದಾಗ ಇಷ್ಟು ಕೋಟಿ ಜನಸಂಖ್ಯೆ ಇರುವವರನ್ನು ಬಹಳ ಕಡಮೆ ಜನಸಂಖ್ಯೆ ಇರತಕ್ಕ ಇಂಗ್ಲಂಡಿನವರಾದ ನಾವು ಎದುರಿಸುವುದಕ್ಕೆ ಸಾಧ್ಯವೇ ಎಂದು ನೋಡಿದ್ದರಲ್ಲಿ ಹಿಂದೂಸ್ಥಾನದಲ್ಲಿ ಎಷ್ಟು ಜನಸಂಖ್ಯೆ ಇದೆಯೋ ಅಷ್ಟೇ ಭಾಷೆಗಳಿವೆ. ಅಷ್ಟೇ ಜಾತಿಗಳಿವೆ ಎಂದು ಕಂಡುಕೊಂಡರು. ನಮಗೆ ಸ್ವಾತಂತ್ರ್ಯ ಬಂದಮೇಲೆ ಸೋದರ ಭಾಷೆಗಳನ್ನೂ ನಮ್ಮ ಮಾತೃಭಾಷೆಯಾದ ಕನ್ನಡವನ್ನು ಹೆಚ್ಚು ಪ್ರೋತ್ಸಾಹಿಸಿಕೊಂಡು ಬರಬೇಕು. ಉಳಿದ ಭಾಷೆಗಳನ್ನು ಕಲಿಯಬೇಕು, ತಿಳಿದುಕೊಳ್ಳ ಬೇಕು ಎನ್ನತಕ್ಕಂಥ ಮನೋಭಾವನೆಯನ್ನು ನಮ್ಮ ಹಿಂದೂಸ್ಥಾನದ ಜನತೆ ಅರಿತುಕೊಂಡಿದ್ದಾರೆ. ಕನ್ನಡ ಭಾಷೆಯಲ್ಲಿ ಸುಲಲಿತವಾಗಿ ಆಡಳಿತವನ್ನು ನಡೆಸುವುದಕ್ಕೆ ಸರ್ಕಾರದವರು ಒಪ್ಪಿಕೊಂಡಿರು ವುದು ಸಂತೋಷದ ವಿಷಯ. ಕನ್ನಡ ಭಾಷೆಯ ಬೆಳವಣಿಗೆಗೆ ಅನುಕೂಲವಾದಂತಹ ಗ್ರಂಥಗಳು ಪ್ರಕಟವಾಗಬೇಕು. ಈಗ ಹಿಂದೂಸ್ಥಾನದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಪರಭಾಷೆ, ರಾಷ್ಟ್ರ ಭಾಷೆ, ಅಂತರರಾಷ್ಟ್ರೀಯ ಭಾಷೆಯ ಅವಶ್ಯಕತೆ ಬಹಳ ಇದೆ. ಮೈಸೂರಿನ ಜನತೆ ಕನ್ನಡ ಹಿಂದಿ

ಮತ್ತು ಇಂಗ್ಲೀಷನ್ನು ಅಭ್ಯಾಸ ಮಾಡಬೇಕು. ಬೇರೆ ಬೇರೆ ಪ್ರಾಂತಗಳ ಭಾಷೆಯನ್ನು ಅಭ್ಯಾಸ ಮಾಡದೆಹೋದರೆ ಸರಿಯಾದ ವ್ಯಕ್ತಿತ್ವವನ್ನು ಸಂಪಾದಿಸುವುದಕ್ಕೆ ಕಷ್ಟವಾಗುತ್ತದೆ. ನಮ್ಮ ಸ್ನೇಹಿತರಾದ ಶ್ರೀ ಗೋಪಾಲ ಸಾಲೆನ್ಸ್ ಅವರು ಹೇಳಿದರು ಮೈಸೂರು ರಾಜ್ಯದಲ್ಲಿ ಎಲ್ಲಾ ಭಾಷೆಗಳಿಗೂ ಅವಕಾಶವನ್ನುಂಟುಮಾಡಿದೆ, ತುಳು, ಮರಾಠಿ, ತೆಲುಗು, ಮಲೆಯಾಳ, ಉರ್ದು, ಇಂಗ್ಲೀಷು, ಹಿಂದಿ, ಕನ್ನಡ ಈ ರೀತಿ ನಾನಾ ಭಾಷೆಗಳನ್ನು ಮಾತನಾಡುವ ಜನಗಳು ಇಲ್ಲಿ ಬಂದು ನೆಲೆಸಿಕೊಂಡಿದ್ದಾರೆ. ಎಲ್ಲಾ ಭಾಷೆಗಳನ್ನು ಅಭಿಮಾನದಿಂದ ಕಾಣತಕ್ಕ ಔದಾರ್ಯ ಮನೋಭಾವನೆಯನ್ನು ಕನ್ನಡ ಜನತೆ ಹೊಂದಿದ್ದಾರೆಂದು ಅವರು ಹೇಳತಕ್ಕಂಥ ವಿಚಾರ ಒಪ್ಪಿಕೊಳ್ಳತಕ್ಕದ್ದಾಗಿದೆ. ಇವೊತ್ತು ಮಹಾರಾಷ್ಟ್ರಕ್ಕೆ ಹೋಗಿ ಹಿಂದಿಯಲ್ಲಿ ಬರೆದಿರತಕ್ಕ ಯಾವುದೇ ಒಂದು ಬೋರ್ಡನ್ನು ನೋಡಿದರೂ ಅದರ ಮೇಲೆ ಟಾರ್ ಬಳಿದಿರುತ್ತಾರೆ. ನಮ್ಮ ದೇಶದಲ್ಲಿ ಯಾವ ಭಾಷೆಯಲ್ಲಿ ಬೋರ್ಡುಗಳನ್ನು ಬರೆದಿದ್ದರೂ ಅದರ ಮೇಲೆ ಟಾರನ್ನು ಬಳಿಯತಕ್ಕ ಮನೋಭಾವನೆ ನಮ್ಮ ಜನತೆಯಲ್ಲಿ ಇಲ್ಲ. ಯಾವುದೇ ಒಂದು ಭಾಷೆಯಾಗಲೀ ಒಂದು ಭಾಷೆಯಲ್ಲಿ ಮಾತನಾಡತಕ್ಕವರು ಇನ್ನೊಂದು ಭಾಷೆಯನ್ನು ದ್ವೇಷ ಮಾಡುವುದು ಮತ್ತು ಇವರು ಉತ್ತರದವರು, ಇವರು ದಕ್ಷಿಣ ಹಿಂದೂಸ್ಥಾನದವರು ಎಂಬ ಒಡಕು ಭಾವನೆಗಳನ್ನುಂಟುಮಾಡುವುದು ಬಹಳ ಖಂಡನೀಯವಾದದ್ದು. ಆಡಳಿತ ದೃಷ್ಟಿಯಿಂದ ಪ್ರಾಂತ ಭಾಷೆಗೆ ಹೆಚ್ಚಿನ ಗೌರವವನ್ನು ಕೊಡಬೇಕು. ರಾಷ್ಟ್ರಭಾಷೆಗೂ, ಅಂತರರಾಷ್ಟ್ರೀಯ ಭಾಷೆಗೂ ಗೌರವ ಕೊಟ್ಟುಕೊಂಡು ಬಂದರೆ ಒಳ್ಳೆಯದು. ನಮ್ಮ ದೇಶದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದುವುದಕ್ಕೆ ಹಿಂದಿಯೇ ಲಾಯಕ್ಕಾಗಿದೆ.

ಇಲ್ಲದೆ ಹೋದರೆ ಜಾತೀಯ ವ್ಯಾಮೋಹ ಹೇಗೋ, ಅದೇ ರೀತಿ ಭಾಷೆಗಳ ಮತ್ತು ಪ್ರಾಂತ್ಯಗಳ ವ್ಯಾಮೋಹ ಹೆಚ್ಚಿದರೆ ಕಷ್ಟ ಅನುಭವಿಸಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಷ್ಟ್ರಭಾಷೆಯಾವುದು ?

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರಾಷ್ಟ್ರಭಾಷೆ ಹಿಂದಿ. ಸರಳವಾದ ಮತ್ತು ಸುಲಲಿತವಾದ ಭಾಷೆ ಹಿಂದಿ ಎಂದು ತಿಳಿದುಕೊಂಡಿದ್ದೇನೆ. ರಾಷ್ಟ್ರಕ್ಕೆ ಅಗತ್ಯವಾಗಿ ಬೇಕಾದುದನ್ನು ಖಂಡಿತವಾಗಿಯೂ ಬಿಡುವುದಿಲ್ಲ. ಆದ್ದರಿಂದ ಈ ಮಸೂದೆಗೆ ಹೆಚ್ಚಿನ ಬೆಂಬಲ ಕೊಡುತ್ತಾ ಇದ್ದೇನೆ. ಐ. ಎ. ಎಸ್. ಪರೀಕ್ಷೆಗಳ ವಿಚಾರವಾಗಿ ನಮ್ಮ ಸ್ನೇಹಿತರು ಮಾತನಾಡಿದರು. ಆಲ್-ಇಂಡಿಯ ಕಾಂಪಿಟೆಷನ್ಸ್ ಮತ್ತು ದೊಡ್ಡ ದೊಡ್ಡ ಪರೀಕ್ಷೆಗಳಿಗೆ ನಮ್ಮ ವಿದ್ಯಾರ್ಥಿಗಳು ಕುಳಿತುಕೊಳ್ಳುವಾಗ ತುಂಬಕಷ್ಟ ಅನುಭವಿಸಬೇಕಾಗುತ್ತದೆ ಎಂಬ ಪ್ರಶ್ನೆ ಬೇರೆ, ಒಂದು ಸಾಹಿತ್ಯದ ಜ್ಞಾನವನ್ನು ಹೆಚ್ಚಾಗಿ ಸಂಪಾದಿಸಿಕೊಳ್ಳಬೇಕಾದರೆ ಎಲ್ಲ ಸೋದರ ಭಾಷೆಗಳಿಗೂ ಗೌರವ ಕೊಡತಕ್ಕಂಥ ಮನೋಭಾವ ಬೆಳಸಿದರೆ ಅನುಕೂಲವಾಗುತ್ತದೆ; ನಮ್ಮ ಕನ್ನಡಕ್ಕೆ ಹೆಚ್ಚಿನ ಗೌರವ ಬರುತ್ತದೆ. ಕನ್ನಡ ಮಾಧ್ಯಮ ಆಗಬೇಕೆಂದು ಹೆಚ್ಚಿನ ಪ್ರಯತ್ನ ನಡೆಯುತ್ತಾ ಇದೆ ಆದರೆ ಅದಕ್ಕೆ ಬೇಕಾದ ಸಲಕರಣೆಗಳನ್ನು ಸಂಪಾದಿಸಿಕೊಂಡಿಲ್ಲ. ಕೆಲವುಕಡೆ ಕನ್ನಡ ಪುಸ್ತಕಗಳನ್ನು ಪ್ರಿಂಟ್ ಮಾಡಿದ್ದಾರೆ. ಅದರಲ್ಲಿರುವ ಭಾಷೆಯನ್ನು ಓದಿನೋಡಿದರೆ ಕನ್ನಡಕ್ಕೆ ಪ್ರೋತ್ಸಾಹ ಕೊಡುವುದಕ್ಕೆ ಬದಲು ಕನ್ನಡದ ಕೊಲೆ ಆಗುತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಏನೋ ಕನ್ನಡಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಮಾಡುತ್ತಿದ್ದಾರೆ. ಕನ್ನಡ ವಿದ್ವಾಂಸರುಗಳನ್ನು ಆರಿಸಿ ತನ್ಮೂಲಕ ಕನ್ನಡ ಪುಸ್ತಕಗಳನ್ನು ಬರೆಸಿದರೆ ಅದರಿಂದ ಪ್ರಯೋಜನವಾಗುತ್ತದೆ. ಪ್ರೋತ್ಸಾಹ ಕೊಡಬೇಕು ಎನ್ನುವ ದೃಷ್ಟಿಯಿಂದ ಹಳೆಗನ್ನಡ ಹೊಸಗನ್ನಡ ಬೆರೆಸಿ ಬಿಡುತ್ತಾರೆ. ಮರಾಠಿ, ತೆಲುಗು, ತಮಿಳು ಬೆರೆಸಿ ಓದುವುದಕ್ಕೆ ಅರ್ಥವಾಗದಂತೆ ಬರೆದರೆ ಅದರಿಂದ ನಿಜವಾಗಿಯೂ ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲ. ನಮ್ಮ ರಾಜ್ಯ ಮೊದಲು ಮೈಸೂರು ಆಗಿದ್ದಾಗ, ಶ್ರೀಮನ್ ಮಹಾರಾಜರ ಸರ್ಕಾರ ಇದ್ದಾಗ, ಕನ್ನಡ ಭಾಷೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದಾರೆ. ಕನ್ನಡ ಗೊತ್ತಿಲ್ಲದ ಅಧಿಕಾರಿಗಳು ಹಳ್ಳಿಗಳಲ್ಲಿ ಇದ್ದರೆ ಕೆಲಸ ಮಾಡುವುದು ತುಂಬ ಕಷ್ಟವಾಗುತ್ತದೆ. ಶ್ರೀ ಮುಕ್ಕಣ್ಣಪ್ಪನವರು ತಮ್ಮ ಜಿಲ್ಲಾಧಿಕಾರಿಗಳ ವಿಷಯವನ್ನು ಹೇಳಿದರು. ಅಧಿಕಾರಿಗಳಿಗೆ ಕನ್ನಡ ತಿಳಿಯದಿದ್ದರೆ ಅಧಿಕಾರ ಮಾಡುವುದಕ್ಕೆ ತುಂಬ ಕಷ್ಟವಾಗುತ್ತದೆ. 100ಕ್ಕೆ 100 ಜನ ಕನ್ನಡ ಮಾತನಾಡುವ ಹಳ್ಳಿಜನಗಳು ಬಂದು ತಮ್ಮ ಅರ್ಜಿಗಳನ್ನು ಕೊಟ್ಟರೆ ಅವರು ಅದರಲ್ಲಿ ಏನು ಬರೆದಿದ್ದಾರೆ ಎಂದು ಸ್ವತಃ ಪರಿಶೀಲನೆ ಮಾಡುವ ಶಕ್ತಿ ಇರಬೇಕು. ರೈತನಬಾಯಿಂದ ಖುದ್ದು ತಿಳಿದ ಕೊಳ್ಳಬೇಕು. ಇನ್ನೊಬ್ಬರು ಹೇಳಿದರೆ ಪರಿಣಾಮವಾಗುವುದಿಲ್ಲ. ಅಧಿಕಾರಿಗಳು ಕನ್ನಡ ಭಾಷೆ ಅಭ್ಯಾಸ ಮಾಡಬೇಕು. ನಮ್ಮ ಮೈಸೂರು ಸಂಸ್ಥಾನದ ಪ್ರಧಾನ ಕಾರ್ಯದರ್ಶಿಗಳು ಕನ್ನಡ ಅಭ್ಯಾಸ ಮಾಡುತ್ತಿದ್ದಾರೆಂದು ಕೇಳಿದೆ; ಬಹಳ ಸಂತೋಷ. ಏಕೆಂದರೆ ಕೆಲವರಿಗೆ ಇನ್ನೊಂದು ಭಾಷೆ ಕಲಿಯುವುದೆಂದರೆ ಸಂಕುಚಿತ ಭಾವನೆ, ತಿರಸ್ಕಾರ. ಅಂಥ ಮನೋಭಾವನೆ ಜನತೆಗೆ ಬರುವುದು ಅವರ ಶ್ರೇಯಸ್ಸು ದೃಷ್ಟಿಯಿಂದ ಒಳ್ಳೆಯದಲ್ಲ. ಊಟಮಾಡುವಾಗ ಪಕ್ವಾನ್ನ ಇದ್ದರೆ, ಹುಳಿಯನ್ನ ಇದ್ದರೆ ಚೆನ್ನಾಗಿರುತ್ತದೆ. ಉಪ್ಪಿನಕಾಯಿ ಇದ್ದರೆ ಇನ್ನೂ ರುಚಿಯಾಗಿರು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ತ್ತದೆ. ಒಂದಕ್ಕೊಂದಕ್ಕೆ ಸೇರಿಕೊಂಡರೆ ಊಟ ರುಚಿಯಾಗಿರುತ್ತದೆ. ಇದೇರೀತಿ ಹೆಚ್ಚು ಭಾಷೆಗಳನ್ನು ಕಲಿತರೆ, ಹೆಚ್ಚು ಭಾಷೆಗಳನ್ನು ತಿಳಿದುಕೊಂಡರೆ ನಿಜವಾದ ಮನುಷ್ಯನಾಗುವುದಕ್ಕೆ ಸಹಾಯಕವಾಗುತ್ತದೆ. ದೊಡ್ಡ ಅಧಿಕಾರಿಗಳು ಇಂಥ ಒಂದು ಭಾಷೆಯನ್ನು ಹೊಂದಿ ಎಲ್ಲರಿಗೂ ಮಾರ್ಗದರ್ಶಕರಾದರೆ ದೇಶ ಮುಂದುವರಿಯಲು ಏನೂ ಅತಂಕವಿಲ್ಲ. ಉತ್ತಮ ಕನ್ನಡ ಸಾಹಿತಿಗಳು, ವಿದ್ವಾಂಸರು ಅವರು ಕನ್ನಡನಾಡಿಗೆ ಸೇವೆ ಸಲ್ಲಿಸಲಿ, ಪರಂತು ಹಿಂದೂಸ್ಥಾನಕ್ಕೆ ಸೇವೆ ಸಲ್ಲಿಸಲು ಪ್ರಯತ್ನ ನಡೆಯಲಿ ಎಂದು ಹೇಳಿ ನಾನು ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಪಿ. ಎ. ಗೌಡ (ಪಾಳ್ಯ).—ಸನ್ಮಾನ್ಯ ಅಧ್ಯಕ್ಷರೆ, ಮೈಸೂರು ರಾಜ್ಯದ ಆಡಳಿತ ಭಾಷೆ ಕನ್ನಡ ಆಗಲಿಕ್ಕೆ ಒಂದು ಅವಕಾಶವನ್ನು ಕೊಡತಕ್ಕಂಥ ಈ ವಿಧೇಯಕ ಸ್ವಾಗತಾರ್ಹವಾದುದು. ಈ ವಿಧೇಯಕದ ಮೇಲೆ ಪ್ರಸ್ತಾಪ ಮಾಡಿದಂಥ ಮಾನ್ಯ ಸದಸ್ಯರೆಲ್ಲರೂ ಅದನ್ನು ಸ್ವಾಗತಿಸಿದ್ದಾರೆ, ರಾಜ್ಯಾಂಗದ 345ನೆಯ ವಿಧಿಯ ಪ್ರಕಾರ ಈ ವಿಧೇಯಕವನ್ನು ಈಗಾಗಲೆ 4—6 ವರ್ಷಗಳ ಹಿಂದೆಯೇ ಮೈಸೂರು ಸರ್ಕಾರ ಅಳವಡಿಸಿಕೊಳ್ಳಬೇಕಾಗಿತ್ತು. ಆದರೂ ಈ ವರ್ಷದಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು. ಅದನ್ನು ಉಪಯೋಗಿಸಿಕೊಳ್ಳತಕ್ಕಂಥ ಅವಕಾಶವನ್ನು ಮಾಡಿಕೊಳ್ಳಬೇಕು ಎಂಬತಕ್ಕಂಥ ಪ್ರಯತ್ನವನ್ನು ಮಾಡಿದ್ದಕ್ಕಾಗಿ ನಾನು ಕೂಡ ಆಡಳಿತವರ್ಗವನ್ನು ಅಭಿನಂದಿಸಬೇಕಾಗಿದೆ. ಕನ್ನಡವನ್ನು ರಾಜ್ಯಭಾಷೆಯನ್ನಾಗಿ, ಆಡಳಿತ ಭಾಷೆಯನ್ನಾಗಿ ಉಪಯೋಗಿಸತಕ್ಕ ಅವಕಾಶವಿರುವುದರ ಜೊತೆಗೆ ಇಂಗ್ಲೀಷ್ ಭಾಷೆಯೂ ಮುಂದುವರಿಯುವುದಕ್ಕೆ ಅವಕಾಶವಿದೆ. ನಮ್ಮ ಕನ್ನಡರಾಜ್ಯದಲ್ಲಿ ಅನೇಕ ಭಾಗಗಳಲ್ಲಿರತಕ್ಕಂಥ ಕನ್ನಡ ಭಾಷೆ ಸರಿಯಾದ ರೀತಿಯಲಲ್ಲ ಎನ್ನುವುದನ್ನು ಮಾನ್ಯ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ಶ್ರೀಮತಿ ನಾಗರತ್ನಮ್ಮನವರು ಕೆಲವು ಶಬ್ದಗಳನ್ನೂ, ವಾಕ್ಯಗಳನ್ನೂ ಸಭೆಯಗಮನಕ್ಕೆ ತಂದಿದ್ದಾರೆ. ಅನೇಕಸಾರಿ ನಾನು ಪ್ರಶ್ನೆಪತ್ರಗಳನ್ನು ಮತ್ತು ಮಸೂದೆಯ ಕರಡು ಪ್ರತಿಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ಓದಲಿಕ್ಕೆ ಬಾರದಂಥ ಅನೇಕ ವಾಕ್ಯಗಳನ್ನು ನೋಡುತ್ತೇನೆ. ನಮ್ಮ ರಾಜ್ಯದಲ್ಲಿ ಒಂದೇ ಅರ್ಥವನ್ನು ಕೊಡುವಂಥ ಅನೇಕ ಕ್ಲಿಷ್ಟಪದಗಳು, ಕಷ್ಟಪದಗಳನ್ನು ನಾವು ನೋಡುತ್ತಾ ಇರುತ್ತೇವೆ. ಸಾಮಾನ್ಯ ಜನತೆಗೆ ಅದರಿಂದ ಪ್ರಯೋಜನವಾಗುವುದಿಲ್ಲ ಎನ್ನುವ ಅಂಶವನ್ನು ಸರ್ಕಾರ ಗಮನದಲ್ಲಿಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಕನ್ನಡರಾಜ್ಯದಲ್ಲಿ ಕನ್ನಡಭಾಷೆ ಆಡುವ ಜನ ಸಾಮಾನ್ಯ ಯಾವಕಡೆ ಇದ್ದರೂ ತಿಳಿಯುವಷ್ಟು, ಹೆಚ್ಚಿನ ಪರಿಶ್ರಮ ಪಡೆಯುವಂಥ; ಶಕ್ತಿ ಸಂಪಾದನೆ ಮಾಡತಕ್ಕಂಥ, ವಿಚಾರ ವಿನಿಮಯ ಮಾಡತಕ್ಕಂಥ, ಅವಕಾಶವಿರತಕ್ಕಂಥ ಒಂದು ಭಾಷೆ ಮತ್ತು ಅದು ಸುಂದರವಾದ ಸರಳವಾದ ರೀತಿಯಲ್ಲಿ ಬೆಳೆಯತಕ್ಕಂತ ಉಳಿಯತಕ್ಕಂಥ ಮಾರ್ಗ ಅತ್ಯವಶ್ಯಕ ಎಂದು ನಾನು ಈ ಸಂದರ್ಭದಲ್ಲಿ ಹೇಳದೆ ವಿಧಿಯಿಲ್ಲ. ಇವತ್ತಿನ ದಿವಸ ಮಂಗಳೂರು ಕನ್ನಡ, ಧಾರವಾಡ ಕನ್ನಡ, ಮೈಸೂರು ಕನ್ನಡ, ಬಿದರ್ ಕನ್ನಡ ಎಂದು ಹೇಳುತ್ತೇವೆ. ಅವುಗಳಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣುತ್ತಾ ಇದ್ದೇವೆ ಆಂಧ್ರಪ್ರದೇಶದ ತೆಲುಗಿನಲ್ಲಿ, ತಮಿಳುನಾಡಿನ ತಮಿಳಿನಲ್ಲಿ ಅಂತಹ ಒಂದು ವ್ಯತ್ಯಾಸವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಗ್ರಾಮಸ್ಥರು ಮಾತನಾಡತಕ್ಕ ಭಾಷೆಗೂ ವಿದ್ಯಾವಂತರು ಮಾತನಾಡತಕ್ಕಂಥ ಭಾಷೆಗೂ ವ್ಯತ್ಯಾಸವಿರಬಹುದು. ಆದರೆ ಭಾಷಾ ಸ್ವರೂಪದಲ್ಲಿ ಯಾವ ಒಂದು ವ್ಯತ್ಯಾಸ ಕೂಡ ತೆಲುಗಿನಲ್ಲಿ ಮತ್ತು ತಮಿಳಿನಲ್ಲಿ ಕಾಣಲು ಸಾಧ್ಯವಿಲ್ಲ ಅಂಥ ಒಂದು ಪರಿಸ್ಥಿತಿ ನಮ್ಮ ಕನ್ನಡರಾಜ್ಯದಲ್ಲಿ ಬೆಳೆಯಲಿಕ್ಕೆ ಸಾಧ್ಯವಾಗುವ ವ್ಯವಸ್ಥೆಯನ್ನು ಕೂಡಲೆ ಸರಕಾರ ಮಾಡಬೇಕು. ಏಕೆಂದರೆ ಸಾಮಾನ್ಯ ಜನತೆಗೆ ಒಂದೇ ಸಮನಾದ, ಸುಲಭವಾದ, ಸರಳವಾದ ಕನ್ನಡಭಾಷೆ ವಿಚಾರ ವಿನಿಮಯ ಮಾಡಲಿಕ್ಕೆ ಅಸ್ತಿತ್ವಕ್ಕೆ ಬಾರದಿದ್ದರೆ, ಕನ್ನಡಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಿಕೊಂಡರೂ ಸಾರ್ಥಕವಾಗುವುದಿಲ್ಲ. ಪ್ರಯೋಜನ ವಾಗುವುದಿಲ್ಲ ಈ ವಿಚಾರಕ್ಕೆ ಸರಕಾರ ಹೆಚ್ಚುಗಮನ ಕೊಡಬೇಕು. ಕನ್ನಡ ಸಾಹಿತ್ಯ ಬೆಳೆದಿಲ್ಲ ಎಂದು ಹೇಳುತ್ತಾ ಇಲ್ಲ. ಆದರೆ ಸಾಮಾನ್ಯ ಜನತೆಗೆ ಬೇಕಾದುದು ತಿಳಿಯಾದ ಭಾಷೆ. ಅಂಥ ಒಂದು ಭಾಷೆ ಅಸ್ತಿತ್ವಕ್ಕೆ ಬರಬೇಕು. ವಿಧ ವಿಧವಾದ ಪ್ರದೇಶಗಳಲ್ಲಿರುವ ಭಾಷಾ ವ್ಯತ್ಯಾಸವನ್ನು ವ್ಯಾಖ್ಯಾನಗಳನ್ನು ಸಮನ್ವಯವಾಗುವಂತೆ ಸರಕಾರ ಮಾಡಬೇಕು. ಪತ್ರ್ಯಪುಸ್ತಕಗಳು, ಸಾಹಿತ್ಯ ಒಂದು ಸಮನ್ವಯ ರೀತಿಯಲ್ಲಿ ಬೆಳೆಯಲು ಭಾಷೆ ಬೆಳೆಯತಕ್ಕಂಥ ವ್ಯವಸ್ಥೆ ಮಾಡದೆ ಇದ್ದರೆ ಕನ್ನಡ ಭಾಷೆಯನ್ನು ರಾಜ್ಯಭಾಷೆ, ಆಡಳಿತಭಾಷೆಯಾಗಿ ಮಾಡಿದರೂ ಅದರಿಂದ ಹೆಚ್ಚಿನ ಪ್ರಯೋಜನ ವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇದರ ಜೊತೆಗೆ ಅಲ್ಪಸಂಖ್ಯಾತರ ಭಾಷೆ ಏನಿದೆ ಅದಕ್ಕೆ ರಕ್ಷಣೆ ಕೊಡಬೇಕಾದುದು ನಮ್ಮ ಕರ್ತವ್ಯ. ಇದೇರೀತಿ ಕನ್ನಡರು ಮಹಾರಾಷ್ಟ್ರದಲ್ಲಿದ್ದಾರೆ, ಮದ್ರಾಸಿನಲ್ಲಿದ್ದಾರೆ. ಆದ್ದರಿಂದ ಅವರ ಹಿತವನ್ನು ಕಾಪಾಡತಕ್ಕಂಥ ರಕ್ಷಣೆ ಕೊಡತಕ್ಕಂಥ ಖಚಿತವಾದ ಕರ್ತವ್ಯ ಆಯಾ ರಾಜ್ಯಗಳದು ಇದೆ. ನಮ್ಮ ಮೇಲೆಯೂ ಅಂಥ ಒಂದು ಕರ್ತವ್ಯ ಇದೆ. ಆ ದೃಷ್ಟಿಯಿಂದ ಇದನ್ನು ಮಾಡಲಿಕ್ಕೇ ಬೇಕು. ರಾಜ್ಯಾಂಗ ಶಾಸನದ 350 (ಎ) ಅನುಚ್ಛೇದದ ಪ್ರಕಾರ ಅಲ್ಪಸಂಖ್ಯಾತರ ಭಾಷೆ ಏನಿದೆ ಆ ಭಾಷೆಗಳ ಬೆಳವಣಿಗೆಗೆ ಮತ್ತು ಅವರಿಗೆ ರಕ್ಷಣೆ ಕೊಡತಕ್ಕಂಥ ಗುರುತರ ಜವಾಬ್ದಾರಿ ಸಂಬಂಧಪಟ್ಟ ರಾಜ್ಯಸರಕಾರಗಳದು ಇದೆ. ಅದನ್ನು ನಾವು ಎಷ್ಟುಮಟ್ಟಿಗೆ ಮಾಡುತ್ತಾ ಇದ್ದೇವೆ ಎನ್ನುವುದನ್ನು ಸರ್ಕಾರ ಆಗಿಂದಾಗ್ಗೆ ಪರ್ಯಾಲೋಚಿಸಬೇಕು. ನಮ್ಮಲ್ಲಿ ತಮಿಳರು ಇದ್ದಾರೆ, ತೆಲುಗು, ಉರ್ದು, ಮರಾಠಿ ಮಾತನಾಡುವ ಜನರಿದ್ದಾರೆ. ಕನ್ನಡದ ಭಾಷೆಗೆ ಏನೊಂದು ಪ್ರೋತ್ಸಾಹ, ಏನೊಂದು ಮಹತ್ವ ಕೊಡುತ್ತಾ ಇದ್ದೇವೆ, ಅದೇರೀತಿ ಅಲ್ಪಸಂಖ್ಯಾತರ ಭಾಷೆಕೂಡ ಬೆಳೆಯುವುದಕ್ಕೆ, ಉಳಿಯುವುದಕ್ಕೆ ಪ್ರೋತ್ಸಾಹ ಕೊಡುವುದರ ಮೂಲಕ ಸಹಾಯ ಮಾಡಿದರೆ ಜನರ ಹಿತಸಾಧನೆ ಮಾಡುವ ಕೆಲಸವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಮಾನ್ಯ ಶ್ರೀಮತಿ ಸುಬ್ಬಮ್ಮನವರು ಬಹಳ ಸೊಗಸಾಗಿ ಭಾಷಣ ಮಾಡುತ್ತಾರೆ, ವ್ಯಾಖ್ಯಾನ ಮಾಡುತ್ತಾರೆ ನಮ್ಮ ದೇಶಭಾಷೆ, ನಮ್ಮ ರಾಜ್ಯಭಾಷೆ ಕನ್ನಡವಾಗಬೇಕು, ರಾಷ್ಟ್ರಭಾಷೆ ಹಿಂದಿ ಆಗಬೇಕು, ಅಂತರ ರಾಷ್ಟ್ರೀಯ ಭಾಷೆ ಅದೂ ಒಂದು ಆಗಬೇಕು ಎಂಬ ಎಲ್ಲಾಮಾತನ್ನೂ ಸೇರಿಸಿ ಸೂಚನೆ ಮಾಡಿದರು. ಅದು ಒಳ್ಳೆಯದು. ಆದರೆ ಈ ಹೊತ್ತಿನ ದಿವಸ ರಾಷ್ಟ್ರಭಾಷೆಯಾಗಿ ಹಿಂದಿಯನ್ನು ಅಳವಡಿಸಿಕೊಂಡು ಇರುತ್ತಾರೆ. 343 ವಿಧಿಯಂತೆ ಈಗಾಗಲೆ ಕೇಂದ್ರಸರಕಾರದ ಆಡಳಿತಭಾಷೆ ಹಿಂದಿ ಎಂಬುದಾಗಿ ಪರಿಗಣಿಸಲ್ಪಟ್ಟಿವೆ. ಅದರ ಜೊತೆಯಲ್ಲಿ ಇಂಗ್ಲೀಷು ಕೂಡ ಮುಂದುವರಿಯಬೇಕು ಎಂಬ ಒಂದು ಅವಕಾಶ ಇಲ್ಲ ಇರುವುದರಿಂದ ಇವತ್ತಿನ ದಿವಸ ಅಷ್ಟೊಂದು ಕಷ್ಟ ಕಾಣುತ್ತಾ ಇಲ್ಲ. ನಮ್ಮ ಯಾವ ರಾಜ್ಯಗಳಲ್ಲಿ ಹಿಂದಿ ಮಾತೃಭಾಷೆಯಾಗಿಲ್ಲವೋ, ಆ ಜನತೆ ಹಿಂದಿ ಭಾಷೆಯಲ್ಲಿ ಎಷ್ಟು ಪರಿಶ್ರಮವನ್ನು ಪಡೆಯಬೇಕೋ ಅಷ್ಟೊಂದು ಪಡೆಯುವವರೆಗೆ, ಯಾವ ಒಂದು ಮಟ್ಟದಲ್ಲಿ ವ್ಯಾಸಂಗವನ್ನು ಮಾಡುವ ಶಕ್ತಿಯನ್ನು ಬೆಳಸಿಕೊಳ್ಳಬೇಕೋ ಅಲ್ಲಿಯವರೆಗೆ ಹಿಂದಿಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಅಂಗೀಕರಿಸಿದ್ದೇವೆಂದು ಹೇಳುವುದಾದರೆ, ನಿಜವಾಗಿಯೂ ನಮ್ಮ ಜನತೆಗೆ ಕಷ್ಟವಾಗುತ್ತದೆ. ಎಂದು ನಾನಾದರೂ ತಿಳಿಸಲು ಇಷ್ಟಪಡುತ್ತೇನೆ. ರಾಷ್ಟ್ರದ ಭಾಷೆ ಮತ್ತು ಒಂದು ದೇಶದ ಭಾಷೆ ಒಂದೇ ಆಗಿರಬೇಕು ಎಂದು ನೀತಿನಿಯಮ ಜಾರಿಗೆ ತರಬಹುದೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ದಿವಸ ರಾಜ್ಯಾಂಗದ ಪ್ರಕಾರ ನಮ್ಮ ರಾಷ್ಟ್ರದಲ್ಲೇ ಸುಮಾರು 14 ಭಾಷೆಗಳಿವೆ. ಈ ಹದಿನಾಲ್ಕನ್ನೂ ಕೂಡ ನಮ್ಮ ರಾಷ್ಟ್ರಭಾಷೆಯಾಗಿ ಪರಿಗಣಿಸಬಹುದು. ಹಾಗೆ ಮಾಡಿದರೆ ಆಗುವ ತೊಂದರೆಯೇನು ಎಂದು ಕೇಳಬೇಕಾಗಿದೆ. ಈಗ ಆಯಾ ರಾಜ್ಯಭಾಷೆಗಳನ್ನು ಸಂಬಂಧಪಟ್ಟ ದೇಶಗಳವರು ಬೆಳೆಸುತ್ತಿದ್ದಾರೆ. ಹಿಂದಿಯನ್ನು ರಾಷ್ಟ್ರಭಾಷೆಮಾಡಿದರೆ ಹಿಂದಿ ಮಾತೃಭಾಷೆಯಾಗಿ ಉಪಯೋಗಿಸಿದವರು ಆ ಭಾಷೆಯನ್ನು ಎಷ್ಟು ಕಾಲದಲ್ಲಿ ಕಲಿಯಲು ಸಾಧ್ಯ? ಇಲ್ಲಿಯವರೆಗೆ ಎಷ್ಟು ಸಾಧ್ಯವಾಗಿದೆ ಎಂಬುದನ್ನು ಯೋಚಿಸಬೇಕು. ಈ ದಿವಸ ಅಂತರರಾಜ್ಯ ಮಟ್ಟದಲ್ಲಿ, ಅಖಿಲಭಾರತ ಮಟ್ಟದಲ್ಲಿ ಸಾರ್ವಜನಿಕ ಸೇವಾರಂಗದಲ್ಲಿ ಬಹಳ ಅಪಘಾತವಾಗುತ್ತಿದೆ. 'ಏಕೆಂದರೆ ಕೇಂದ್ರ ಸರ್ಕಾರದಲ್ಲಿ ಎಲ್ಲ ರಾಜ್ಯದವರಿಗೂ ಸರಿಯಾದ ಪ್ರಾತಿನಿಧ್ಯವಿರಬೇಕು. ಸರ್ವಿಸ್ಸಿನಲ್ಲಿ ನಮ್ಮ ದೇಶದ ಜನರಿಗೆ ಸರಿಯಾದ ಪ್ರಾತಿನಿಧ್ಯವಿರಬೇಕು. ಹಾಗಾಗಬೇಕಾದರೆ ಎಲ್ಲ ರಾಜ್ಯಗಳಲ್ಲೂ ಈ ದಿವಸ ಇಂಗ್ಲೀಷ್ ಇರುವುದರಿಂದ ಸಾಧ್ಯ ಎಂದು ಹೇಳಬಹುದು. ಎಲ್ಲ ರಾಜ್ಯಗಳಿಗೂ ಅದು ಪರಕೀಯವಾದ ಭಾಷೆ. ಆ ದೃಷ್ಟಿಯಿಂದ ಎಲ್ಲರೂ ಒಂದೇ ಸಮನಾದ ಸ್ಥಿತಿಯಲ್ಲಿದ್ದಾರೆ. ಈ ದಿವಸ ಹಿಂದಿ ರಾಷ್ಟ್ರಭಾಷೆಯಾದರೆ ಹಿಂದಿ ಮಾತೃಭಾಷೆಯಾಗಿರುವವರಿಗೆ ಉತ್ತಮ, ಬೇರೆ ಮಾತೃಭಾಷೆಗಳವರಿಗೆ ಅನುಕೂಲವಿರುವುದಿಲ್ಲ; ಅದರಿಂದ ಧಕ್ಕೆಯಾಗುತ್ತದೆ. ಆ ದೃಷ್ಟಿಯಿಂದ ರಾಷ್ಟ್ರಭಾಷೆಯಲ್ಲಿ ಸಾಕಷ್ಟು ಪರಿಶ್ರಮ ಪಡೆಯುವವರಿಗೆ ಸಂಪತ್ತಿನಿಂದ ಕೂಡಿರುವ ಭಾಷೆ ರಾಷ್ಟ್ರಭಾಷೆಯಾಗಿರಬೇಕು. ಈಗ ಇಂಗ್ಲೀಷಿನಲ್ಲಿ ವ್ಯವಹಾರಜ್ಞಾನ, ಪರಿಶ್ರಮ ಎಲ್ಲ ದೇಶಗಳವರೂ ಪಡೆದಿದ್ದಾರೆ. ಆದರೆ ಇಂಗ್ಲೀಷ್‌ನಲ್ಲಿ ಒಳ್ಳೆಯ ಸಂಪತ್ತು ಅಡಗಿದ್ದರೂ ಅದರಿಂದ ಧಕ್ಕೆಯೇ ಹೊರತು ಒಳ್ಳೆಯದಾಗುವುದಿಲ್ಲ. ಈ ದೃಷ್ಟಿಯಿಂದ ಹಿಂದಿ ರಾಷ್ಟ್ರಭಾಷೆಯಾಗಬೇಕಾದರೆ ಅದು ಯಾರಿಗೆ ಮಾತೃಭಾಷೆಯಲ್ಲವೋ ಅವರು ಒಂದು ಸರಿಯಾದ ಮಟ್ಟಕ್ಕೆ ಬಂದು ಹಿಂದಿಯನ್ನು ಚೆನ್ನಾಗಿ ಕಲಿಯುವವರೆಗೆ ಈಗಿರುವ ವ್ಯವಸ್ಥೆಯನ್ನೇ ಮುಂದುವರಿಸುವುದು ಒಳ್ಳೆಯದು. ಅಂದ ಮಾತ್ರಕ್ಕೇ ಹಿಂದಿ ರಾಷ್ಟ್ರಭಾಷೆಯಾಗಬಾರದೆಂದು ಹೇಳುತ್ತಿಲ್ಲ. 14ಭಾಷೆಗಳನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಿ

(ಶ್ರೀ ಜಿ. ವಿ. ಗೌಡ)

ಮೊದಲಿಂದ ಹಿಂದಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರೆ ಎಲ್ಲಿಯವರೆಗೆ ನಮ್ಮ ಜನ ಹಿಂದಿಯನ್ನು ಚೆನ್ನಾಗಿ ಬಳಸಲು ಶಕ್ತರಾಗುವುದಿಲ್ಲವೋ ಅಲ್ಲಿಯವರೆಗೆ ಎಲ್ಲರಿಗೂ ಪರಕೀಯ ಭಾಷೆಯಾದ ಇಂಗ್ಲೀಷನ್ನು ಮುಂದುವರಿಸುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ನಾನು ತಿಳಿಸಲಿಚ್ಛಿಸುತ್ತೇನೆ.

ಈ ವಿಧೇಯಕದ ಎರಡನೆಯ ವಿಧಿಯಲ್ಲಿ ಕನ್ನಡವನ್ನು ರಾಜ್ಯದ ರಾಜಭಾಷೆ ಮಾಡಿಕೊಳ್ಳಬೇಕೆಂದು ತಿಳಿಸಿದೆ. ಆದರೆ ಕನ್ನಡವನ್ನೇ ಉಪಯೋಗಿಸಬೇಕು ಎಂದು ಯಾವ ಒಂದು ಆದೇಶವೂ ಕೂಡ ಇಲ್ಲ. ರಾಜ್ಯಾಡಳಿತ ಭಾಷೆ ಕನ್ನಡವಾಗಬೇಕು ಎಂದು ಹೇಳಿದೆ ಅಷ್ಟೆ. ಮೂರನೆಯ ವಿಧಿಯ ಪ್ರಕಾರ ಸರ್ಕಾರ ತನ್ನ ಆದೇಶ ಕೊಡುವವರೆಗೆ ಇಂಗ್ಲೀಷನ್ನು ಸರ್ಕಾರಿ ಉದ್ದೇಶಗಳಿಗಾಗಿ ಉಪಯೋಗಿಸ ಕೊಳ್ಳಬಹುದು. ಆದರೆ ಇಂಗ್ಲೀಷ್ ವಜಾಮಾಡಬೇಕು ಎಂದು ಆದೇಶ ಕೊಡಲು ಸರ್ಕಾರಕ್ಕೆ ಅಧಿಕಾರ ಇದೆಯೆ ಎಂದು ಯೋಚನೆ ಮಾಡಬೇಕು. ರಾಜ್ಯಾಂಗದ ಪ್ರಕಾರ ಸರ್ಕಾರಕ್ಕೆ ಅಧಿಕಾರವಿಲ್ಲ. ಅದಕ್ಕೆ ಸಂಬಂಧಪಟ್ಟ ಶಾಸನಗಳಿಗೆ ಮಾತ್ರ ಅಧಿಕಾರವಿದೆ. ಮಾನ್ಯ ಕಾನೂನು ಮಂತ್ರಿಗಳು ಸ್ವಲ್ಪಮಟ್ಟಿಗೆ ಪರಿಶೀಲಿಸಿದರೆ ಬಹಳ ಉತ್ತಮ. 345ನೆಯ ಆರ್ಟಿಕಲ್ಲನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ಅದು ಈ ರೀತಿಯಿದೆ:

"Subject to the provisions of articles 346 and 347, the Legislature of a State may by law adopt any one or more of the languages in use in the State or Hindi as the langage or languages to be used for all or any of the official purposes of that State

Provided that, until the Legislature of the State otherwise provides by law, the English language shall continue to be used for those official purpose within the State for which it was being used immediately before the commencement of this Consitution."

ಅದರಂತೆ ಅಫಿಷಿಯಲ್ ಲಾಂಗ್ವೇಜ್ ಮೈಸೂರಿಗೆ ಕನ್ನಡ ಇರಬೇಕೆಂದು ಮಾಡಿದ್ದೇವೆ. ಸಂಬಂಧಪಟ್ಟ ಶಾಸನಸಭೆಗಳು ಇಂಗ್ಲೀಷನ್ನು ಕಲಿಸಬೇಕು ಅಥವಾ ಉಪಯೋಗಿಸಬೇಕು ಅಥವಾ ಉಪಯೋಗಿಸ ಬಾರದು ಎಂದು ಶಾಸನ ಮಾಡುವವರೆಗೆ ಇಂಗ್ಲೀಷ್ ಭಾಷೆ ಮುಂದುವರಿಯಬೇಕು ಎಂದು 345ನೆಯ ಆರ್ಟಿಕಲ್‌ನ ಪ್ರಾವಿಸೋದಲ್ಲಿ ಹೇಳಿದೆ. ಮೂರನೆಯ ಕ್ಲಾಜಿನಲ್ಲಿ ಈ ವಿಧೇಯಕದ ಮೂಲಕ ಸರ್ಕಾರ ತಾನು ಆದೇಶ ಕೊಟ್ಟಾಗ ಇಂಗ್ಲೀಷ್ ಭಾಷೆ ನಿರ್ಮೂಲವಾಗಬೇಕು, ಉಪಯೋಗಿಸಲ್ಪಡಬಾರದು, ಎಲ್ಲ ಕಾರ್ಯಕಲಾಪಗಳೂ ಕೂಡ ಕನ್ನಡದಲ್ಲೇ ನಡೆಯಬೇಕು ಎಂದು ಸೂಚಿಸುವುದು ನನ್ನ ಅಭಿಪ್ರಾಯದಲ್ಲಿ 345ನೆಯ ಆರ್ಟಿಕಲ್‌ನ ಪ್ರಾವಿಸೋಗೆ ವ್ಯತಿರಿಕ್ತವಾಗಿದೆ. ಸರ್ಕಾರ ಈ ಸಭೆಗಿರುವ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಈ ವಿಧೇಯಕ ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಬಹುಶಃ ಮುಖ್ಯ ಮಂತ್ರಿಗಳು ಇದನ್ನು ಗಮನಿಸಿದ್ದರೆ ಚೆನ್ನಾಗಿತ್ತು. ಇದನ್ನು ವಿಮರ್ಶೆ ಮಾಡಬೇಕು. ನಾವು ರಾಜ್ಯಾಂಗಕ್ಕೆ ವಿರೋಧವಾಗಿ ಅಥವಾ ಧಕ್ಕೆ ತರುವ ರೀತಿಯಲ್ಲಿ ಯಾವ ಕಾನೂನನ್ನೂ ಮಾಡುವುದಕ್ಕಾಗುವುದಿಲ್ಲ. ಮೂರನೆಯ ಕ್ಲಾಜು ರಾಜ್ಯಾಂಗಕ್ಕೆ ವಿರೋಧವಾಗುವುದರಿಂದ ಅದು ನಿಲ್ಲುವುದಕ್ಕೆ ಸಾಧ್ಯವಿಲ್ಲ. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಅವರು ಪರಿಶೀಲಿಸಬೇಕು.

ಸರ್ಕಾರ ನೋಟಿಫೈ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಮಾಡಬೇಕಾದು ಈ ಶಾಸನಸಭೆ. ಇಂಗ್ಲೀಷನ್ನು ತ್ಯಜಿಸಿದ್ದೇವೆ, ಇಂಥ ದಿವಸದಿಂದ ಒಂದು ಕಾನೂನು ಮಾಡಿದೆ, ಇಂದಿನಿಂದ ಸರ್ಕಾರಿ ಕಾರ್ಯಕಲಾಪಗಳಲ್ಲಿ ಕನ್ನಡ ಉಪಯೋಗಿಸಬಹುದು ಎಂದು ಶಾಸನ ಸಭೆ ಹೇಳಬಹುದು. ಈ ಶಾಸನಸಭೆ ಅಂಥ ಶಾಸನ ಅಂಗೀಕಾರ ಮಾಡುವವರೆಗೆ ಸರ್ಕಾರಕ್ಕೆ ನೋಟಿಫಿಕೇಷನ್ ಹೊರಡಿಸುವ ಹಕ್ಕಿರುವುದಿಲ್ಲ. ಈ ವಿಚಾರವನ್ನು ರಾಜ್ಯಸರ್ಕಾರ ಅಥವಾ ಮುಖ್ಯಮಂತ್ರಿಗಳು ಪರಿಶೀಲಿಸಿದರೋ ಇಲ್ಲವೋ ಗೊತ್ತಿಲ್ಲ. ಕನ್ನಡ ರಾಜ್ಯಭಾಷೆ ಮಾಡಬೇಕೆಂದು ಈ ವಿಧೇಯಕದಲ್ಲಿ ನಮೂದಿಸಿರುವುದು ರಾಜ್ಯಾಂಗಕ್ಕೆ ಚ್ಯುತಿ ತರುತ್ತದೆ.

ಆದ್ದರಿಂದ ಈ ಶಾಸನ ಸಭೆಗೆ ರಾಜ್ಯಾಂಗ ಶಾಸನದ ಪ್ರಕಾರ ಏನು ಅಧಿಕಾರವಿದೆಯೋ ಅದನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದಾಗಿ ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಮ್ಮ ಉದ್ದೇಶ ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವುದು. ಆದ್ದರಿಂದ 1, 2, ಮತ್ತು 5ನೆಯ ವಿಧಿಗಳನ್ನು ಈ ಮಸೂದೆಯಲ್ಲಿ ಹಾಗೆಯೇ ಉಳಿಸಿಕೊಂಡು 3,4

ಮತ್ತು 6ನೆಯ ವಿಧಿಗಳನ್ನು ಮಾತ್ರ ತೆಗೆದುಹಾಕಿಬಿಟ್ಟರೆ ಆಗ ಪರ್ಫೆಕ್ಟ್ ಏನಾರ್ಕಿಸಂ ಆಗುತ್ತದೆ. ಕಾನ್ಸ್ಟಿಟ್ಯೂಷನ್ನಿನ 345ನೆಯ ವಿಧಿಯಂತೆ ಈ ಮಸೂದೆ ರಚನೆಯಾಗಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಹೇಳಿರತಕ್ಕ ಅಂಶವನ್ನು ಚೆನ್ನಾಗಿ ಪರಿಶೀಲಿಸಬೇಕು. It does not stand the test of constitution. Validity ಈ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಈ ಮಸೂದೆಯ ಬಗ್ಗೆ ಯಾವ ನಮೂನೆಯಲ್ಲಿ ನಾವು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೋ ಆ ರೀತಿಯಲ್ಲಿ ಎಲ್ಲಾ ಅಂಶಗಳನ್ನು ಅದರಲ್ಲಿ ಕ್ರೋಢೀಕರಿಸಬೇಕೆಂದು ಹೇಳುತ್ತೇನೆ. ಆದರೆ ಕನ್ನಡ ಆಡಳಿತಭಾಷೆಯಾಗಲಿ ಎಂದು ಸುಮ್ಮನೆ ವ್ಯವಸ್ಥೆ ಮಾಡಿದರೆ ಸಾಲದು. ಅದನ್ನು ಕಾಯಾವಾಚಾಮನಸ್ಸಿನಿಂದ ಮಾಡಬೇಕು. ಸರಳವಾದ ಒಂದು ನಮೂನೆ ಇರತಕ್ಕ ಕನ್ನಡ ಭಾಷೆ ಬೆಳೆಯಬೇಕು. ಈ ಬಗ್ಗೆ ಸರ್ಕಾರ ಎಲ್ಲ ವ್ಯವಸ್ಥೆಗಳನ್ನು ಮಾಡಬೇಕೆಂದು ತಿಳಿಸಿ ಈ ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತಿಸಿ ಮತ್ತೆ ಸರ್ಕಾರದವರು ಈ ಮಸೂದೆಯನು ದೀರ್ಘವಾಗಿ ಪರಿಶೀಲಿಸಿ ಒಂದು ಪರಣಿತ ಸಮಿತಿಗಾದರೂ ಕಳುಹಿಸಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಸಭಾಪತಿಗಳೇ, ಇಂದು ನಮ್ಮ ಮುಂದಿರುವ ಕನ್ನಡ ಭಾಷೆ ಮೈಸೂರು ರಾಜ್ಯದ ರಾಜ್ಯಭಾಷೆಯಾಗಬೇಕೆಂದಿರುವ ವಿಧೇಯಕವನ್ನು ನಾನು ಅತಿ ಸಂತೋಷದಿಂದ ಸ್ವಾಗತಿಸುತ್ತಾ ಅದನ್ನು ಸಮರ್ಥಿಸಲು ಇಚ್ಛಿಸುತ್ತೇನೆ.

ಕನ್ನಡ ಕವಿಗಳು ಹಾಡಿರುವ "ಕರ್ಣಾಟಕಾಂಬೆ ನೀ ಧನ್ಯೆ ಧನ್ಯೆ" ಎಂಬ ಕವನದ ಉದ್ದೇಶ ಇಂದಿನಿಂದ ಸಾರ್ಥಕವಾಗುವುದೆಂದು ಮತ್ತು ಕನ್ನಡಾಂಬೆಯ ಮಕ್ಕಳ ಕನಸು ನೆನಸಾಗುವ ಕಾಲ ಬಂದಿರುವುದೆಂದು, ಆ ಬಯಕೆ ಇಂದಿನಿಂದ ಈಡೇರುತ್ತಿದೆಯೆಂದು ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ನಮ್ಮ ನಾಡಿನಲ್ಲಿ ನೂರಕ್ಕೊಬ್ಬರು ಇಂಗ್ಲೀಷನ್ನು ಚೆನ್ನಾಗಿ ಬಲ್ಲವರಿಲ್ಲ. ಇಂಥಾ ಕನ್ನಡ ನಾಡಿನಲ್ಲಿ ಕನ್ನಡವು ಇದುವರೆಗೂ ರಾಜ್ಯಭಾಷೆಯಾಗದೆ ಇದ್ದ ಸಂಗತಿಯನ್ನು ನೆನಸಿದರೆ ಬಹಳ ಶೋಚನೀಯವಾಗುತ್ತದೆ. ಯಾವ ಕನ್ನಡ ಪ್ರಜೆಗೂ ಇದರಿಂದ ವ್ಯಸನವಾಗದೆ ಇಲ್ಲ. ಆದ್ದರಿಂದ ಕನ್ನಡನಾಡಿನಲ್ಲಿ ಕನ್ನಡಿಗರ ರಾಜ್ಯಭಾಷೆ ಕನ್ನಡವಲ್ಲದೆ ಅನ್ಯಭಾಷೆಯಾಗಬಾರದು. ಇದಕ್ಕೆ ಯಾರೂ ಅಡ್ಡಿ ಬರಬಾರದು. ಕನ್ನಡಭಾಷೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕು. ನಮ್ಮ ನಾಡಿನಲ್ಲಿ ಕನ್ನಡ ರಾಜ್ಯಭಾಷೆಯಾಗುವ ಕಾಲ ಮೊದಲೇ ಇತ್ತು. ಆದರೂ ಚಿಂತಿಲ್ಲ. ತಾಳಿದವನು ಬಾಳಿಯಾನು ಎಂಬ ನಾಣ್ಣುಡಿಯಂತೆ ಬಹಳ ದಿವಸಗಳಿಂದ ತಾಳಿಕೊಂಡು ಬಂದಿರುವ ನಮಗೆ ಈ ಕನ್ನಡಭಾಷೆಯ ನೆಲೆಯಲ್ಲಿ ಈಗ ಬಾಳುವ ಕಾಲ ಒದಗಿದೆ. ಆದ್ದರಿಂದ ಸರ್ಕಾರದವರು ಇಂದಿನಿಂದಲಾದರೂ ಈ ವಿಧೇಯಕವನ್ನು ಯಶಸ್ವಿಯಾಗಿ ಅತಿಜರೂರಾಗಿ ಕಾರ್ಯರೂಪಕ್ಕೆ ತರಬೇಕೆಂದು ನಾನು ಆಶಿಸುತ್ತೇನೆ. ಇಂದು ನಮ್ಮ ನಾಡಿನಲ್ಲಿ ಸೆಕ್ರೆಟೇರಿಯಟ್ ಲೆವಲ್ಲಿನಿಂದ ಹಿಡಿದು ತಾಲ್ಲೂಕ್ ಆಫೀಸ್ ಲೆವಲ್ಲಿನ ಯಾವ ಆಫೀಸಿಗೆ ಹೋದರೂ ಕನ್ನಡ ಮಾತನಾಡಿದವರಿಗೆ ಗೌರವ ಕಡಮೆ. ಅವರ ಕೆಲಸ ಕಾರ್ಯಗಳಾಗುವುದೂ ಸಹ ನಿಧಾನ. ಆದರೆ ಅರ್ಧಮರ್ಧ ಇಂಗ್ಲಿಷ್‌ನಲ್ಲಿ ಮಾತನಾಡುವವರು ಹೋದರೆ ಸಾಕು. ಅವರುಗಳನ್ನು ಏನೋ ಬೃಹಸ್ಪತಿಗಳಂತೆ ಕಂಡು ಅವರಿಗೆ ಗೌರವ, ಸ್ಥಾನ ಮತ್ತು ಅವರು ಇಂಗ್ಲೀಷ್‌ನಲ್ಲಿ ಬರೆದುಕೊಂಡು ಬಂದ ಅರ್ಜಿಗಳಿಗೆ ಮಾನ್ಯತೆ ಕೊಡುವುದಲ್ಲದೆ ಅವರ ಕೆಲಸ ಕಾರ್ಯಗಳೂ ಕೂಡ ಬಹು ಜಾಗ್ರತೆ ಕೈಗೂಡುತ್ತವೆ. ಇದು ಹೆಚ್ಚು ಕಡಮೆ ಇಂಗ್ಲಿಷ್ ಬಾರದೇ ಇರುವ ಕನ್ನಡಿಗರೆಲ್ಲರಿಗೂ ಅನುಭವವಾಗಿರಬಹುದು. ಇಂಗ್ಲಿಷ್ ಭಾಷೆಯಲ್ಲಿ ಬೃಹಸ್ಪತಿಗಳಿದ್ದರೆ ಕನ್ನಡ ಭಾಷೆಯಲ್ಲಿ ಬೃಹಸ್ಪತಿಗಳಿಲ್ಲವೆಂದು ಯಾರೂ ತಿಳಿಯಕೂಡದು. ಅಂದಮೇಲೆ ಇಂಗ್ಲಿಷ್‌ನ ಗಂಧವನ್ನೇ ಅರಿಯದ ಕನ್ನಡಿಗರಲ್ಲಿ ಬೃಹಸ್ಪತಿಗಳಿಲ್ಲವೇ, ಪಂಡಿತರುಗಳಿಲ್ಲವೇ ? ಅವರ ಬುದ್ಧಿಕೌಶಲ್ಯ ಯಾರಿಗೆ ತಾನೇ ಕಡಿಮೆಯಾಗಿದೆ ?

ಇನ್ನು ಕೆಲವು ಆಫೀಸುಗಳಿಗೆ ಕನ್ನಡ ಟೈಪ್‌ರೈಟರುಗಳನ್ನು ಸರ್ಕಾರದವರು ಇತ್ತೀಚೆಗೆ ಒದಗಿಸಿದ್ದಾರೆ. ಆದಾಗ್ಯೂ ಅದರ ಉಪಯೋಗ ಆಗುತ್ತಾ ಇಲ್ಲ. ಅದು ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ, ಇದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಗಮನಿಸಿರುವರೇ ? ಕನ್ನಡ ಟೈಪ್ ಮಾಡುವ ಅನುಭವಶಾಲಿಗಳಿಲ್ಲದೆ ಟೈಪ್‌ರೈಟಿಂಗ್ ಮೆಷಿನ್ನುಗಳು ತುಕ್ಕು ಹಿಡಿಯುವ ಗತಿ ಬಂದಿದೆ. ಆದ್ದರಿಂದ ಘನ ಸರ್ಕಾರದವರು ಈಗಲಾದರೂ ಕನ್ನಡ ಟೈಪ್‌ರೈಟಿಂಗ್ ಇನ್ಸ್ಟಿಟ್ಯೂಟುಗಳನ್ನು ತೆರೆದು ಹೆಚ್ಚು ಹೆಚ್ಚು ಮಂದಿಗಳಿಗೆ ತರಬೇತಿ ಕೊಟ್ಟು ಕನ್ನಡ ಟೈಪಿಸ್ಟುಗಳ ಅಭಾವವನ್ನು ನೀಗಿಸಬಲ್ಲಿರೆಂದು ನಾನು ನಂಬಿದ್ದೇನೆ. ಅದೂ ಅಲ್ಲದೆ ಸರ್ಕಾರದವರೇ ನೇರವಾಗಿ ಕನ್ನಡ ಟೈಪಿಸ್ಟುಗಳಿಗಾಗಿ ಒಂದು ತರಬೇತಿ ಕೇಂದ್ರವನ್ನು ತೆರೆದು ಹೆಚ್ಚು ಹೆಚ್ಚಾಗಿ ಎಲ್ಲಾ ಆಫೀಸುಗಳಲ್ಲೂ ಕನ್ನಡ ಟೈಪಿಸ್ಟುಗಳನ್ನು ನೇಮಕ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ನನ್ನ ಕ್ಷೇತ್ರವಾದ ತುಮಕೂರು ತಾಲ್ಲೂಕ್ ಬೋರ್ಡಿಗೆ ಒಂದು ಕನ್ನಡ ಟೈಪ್‌ರೈಟರನ್ನು ತರಿಸಿ ಒಂದು ವರ್ಷವಾಗುತ್ತಾ ಬಂದರೂ ಅದರ ಉಪಯೋಗವಾಗುತ್ತಾ ಇಲ್ಲ ಆದರೆ ಅಲ್ಲಿಗೆ ಕನ್ನಡ ಟೈಪಿಸ್ಟ್ ಇಲ್ಲದೆ ಆ ಯಂತ್ರ ಸುಮ್ಮನೆ ಮೂಲೆಯಲ್ಲಿ ಬಿದ್ದಿದೆ. ಆದ್ದರಿಂದ ಇನ್ನು ಮುಂದೆ ಘನ ಸರ್ಕಾರದವರು ಕನ್ನಡ ಟೈಪ್

(ಶ್ರೀಮತಿ ಜಿ. ಪಿ. ಭಾಗೀರಥಮ್ಮ)

ರೈಟಿಂಗ್ ಮೆಷಿನ್‌ಗಳನ್ನು ಒದಗಿಸುವುದರ ಜೊತೆಗೆ ಕನ್ನಡ ಟೈಪಿಂಗ್‌ನಲ್ಲಿ ತರಬೇತಿ ಹೊಂದಿರುವ ಟೈಪಿಸ್ಟ್‌ಗಳನ್ನು ನೇಮಿಸಿದರೆ ಇಂದು ನಮ್ಮ ಮುಂದಿಟ್ಟಿರುವ ವಿಧೇಯಕದ ಒಂದು ಭಾಗ ನಿಜವಾಗಿ ಸಾರ್ಥಕವಾಗುವುದೆಂದು ಹೇಳುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ ವಿಧೇಯಕದಲ್ಲಿ ಸೂಚಿಸಿರುವಂತೆ ಇನ್ನು ಕೆಲವು ವರ್ಷಗಳು ಇಂಗ್ಲಿಷ್ ಭಾಷೆ ಇರಬೇಕಾಗಿರುವುದೇನೋ ಸರಿ. ವ್ಯವಹಾರಿಕ ದೃಷ್ಟಿಯಿಂದ ಇಂಗ್ಲಿಷ್ ಭಾಷೆ ಕಲಿಯುವ ಅವಶ್ಯಕತೆ ಇರಬೇಕೇ ಹೊರತು ಕಡ್ಡಾಯವಾಗಿ ಅದನ್ನು ಕಲಿಯಬೇಕೆಂಬ ನಿಬಂಧನೆ ಇರಬಾರದು.

[MR. SPEAKER in the Chair]

ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಇನ್ನುಮುಂದೆ ಕಾನ್ವೆಂಟುಗಳನ್ನು ಹೆಚ್ಚು ತೆರೆಯುವುದು, ಮತ್ತು ಅವಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವುದನ್ನು ಕಡಮೆ ಮಾಡಬೇಕು. ನಮ್ಮ ಚಿಕ್ಕಮಕ್ಕಳನ್ನು ಎಳೆತನದಲ್ಲಿಯೇ ಇಂಗ್ಲಿಷ್ ಭಾಷಾಪ್ರೇಮಿಗಳಾಗಿ ಮಾಡಿ ಮುಂದೆ ಅವರು ದೊಡ್ಡವರಾದ ಮೇಲೆ ಕನ್ನಡ ಮಾತನಾಡಲು ಸರಿಯಾಗಿ ಬಾರದೆ ಇರುವುದಕ್ಕೆ ಅವಕಾಶವಾಗುತ್ತಿದೆ. ಇಂತಹ ಕಾನ್ವೆಂಟ್‌ಗಳಿಗೆ ನಮ್ಮ ಮಕ್ಕಳು ಸೇರಿ ಕನ್ನಡ ಭಾಷೆಯ ಅಭಿಮಾನವನ್ನೇ ಮರೆತು ಇಂಗ್ಲಿಷ್ ಭಾಷಾಪ್ರೇಮಿಗಳಾಗಿದ್ದಾರೆ. ಹಿಂದಿನ ಹಿರಿಯತನದ ಭಾಷೆಗಳನ್ನು ಮರೆತು, ಅಪ್ಪ ಅಮ್ಮ ಎನ್ನುವುದನ್ನು ಬಿಟ್ಟು "ಮಮ್ಮಿ, ಡಾಡಿ" ಎನ್ನುವ ಮಕ್ಕಳೇ ಈಗ ಜಾಸ್ತಿಯಾಗಿದ್ದಾರೆ. ಆದ್ದರಿಂದ ಈ ಕಾನ್ವೆಂಟ್‌ಗಳನ್ನು ಹೆಚ್ಚಿಗೆ ತೆರೆಯುವ ದೆಸೆಯಿಂದ ಕನ್ನಡ ಭಾಷಾಪ್ರೇಮವನ್ನೇ ಮರೆಯುವುದಕ್ಕೆ ಅವರಿಗೆ ಅವಕಾಶವಾಗುತ್ತಿದೆ. ಇವತ್ತಿನ ಚಿಕ್ಕವಯಸ್ಸಿನ ಮಕ್ಕಳೇ ನಾಳೆ ಮುಂದಿನ ಜನಾಂಗವಾಗಿರುತ್ತಾರೆ. ಅಂದಮೇಲೆ ಇಂದು ನಾವು ಮಾಡಬೇಕೆಂದಿರುವ ವಿಧೇಯಕವನ್ನು ನಾಶಮಾಡಲು ಅವಕಾಶವಿಲ್ಲದಂತೆ ಎಚ್ಚರದಿಂದಿರಬೇಕು. ಆದ್ದರಿಂದ ಈ ಕನ್ನಡ ಭಾಷೆಯ ಬೆಳವಣಿಗೆಗಾಗಿ ಈ ವಿಧೇಯಕವನ್ನು ಶಾಸ್ತ್ರೀಯವಾಗಿ ಜಾರಿಗೆ ತರಲು ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ ಕಾನ್ವೆಂಟುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದನ್ನು ಕೂಡಲೇ ನಮ್ಮ ಸರ್ಕಾರದವರು ಕಡಮೆ ಮಾಡಬೇಕು. ಎಳೆತನದಲ್ಲಿಯೇ ನಮ್ಮ ಮಕ್ಕಳ ಹೃದಯದಲ್ಲಿ ಕನ್ನಡದ ನುಡಿಯನ್ನು ತುಂಬಿ ಕನ್ನಡ ಭಾಷೆಗೆ ಹೆಚ್ಚಿನ ಮಾನ್ಯತೆ ಕೊಡುವಂತಾಗಬೇಕೆಂದು ವಿನಂತಿಸಿಕೊಂಡು ಇಂದು ನಮ್ಮ ಮುಂದಿರುವ ಈ ವಿಧೇಯಕವನ್ನು ನಾನು ಸಂತೋಷದಿಂದ ಸ್ವಾಗತಿಸುತ್ತಾ ಸಮರ್ಥಿಸಿ, ನನಗೆ ಎರಡು ಮಾತುಗಳನ್ನಾಡಲು ಈ ಸಂದರ್ಭದಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The Chief Minister will reply.

Sri B. P. KADAM.—The other day the chair told me that it would give me a chance to speak.

Mr. SPEAKER.—Provided other members co-operate. If members go on taking more time, what can I do? There are amendments to the Bill. At what time the Hon'ble member can speak.

Sri A. KRISHNA SHETTY.—I have not tabled any amendments.

Mr. SPEAKER.—That does not mean that the member cannot speak on amendments. I believe the time fixed by the Business Advisory Committee is expiring and so I extend the time by one hour.

† ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಮೈಸೂರು ರಾಜ್ಯದ ಅಧಿಕೃತ ಭಾಷಾ ವಿಧೇಯಕದ ಬಗ್ಗೆ ಈ ಸಭೆಯ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಬಹಳ ವಿಧಾಯಕವಾದ ರೀತಿಯಲ್ಲಿ ಮಾತನಾಡಿ ಈ ಮಸೂದೆಯ ಉದ್ದೇಶ ಕಾರ್ಯಗತವಾಗಬೇಕಾದರೆ ಏನೇನು ಕೆಲಸಗಳಾಗಬೇಕು ಎಂಬುದಾಗಿ ಹೇಳಿದ್ದಾರೆ. ಕೆಲವು ಸಲಹೆಗಳು ಈ ಮಸೂದೆಗೆ ನೇರವಾಗಿ ಸಂಬಂಧವಿಲ್ಲದೆ ಹೋದರೂ ಏನೇನು ಕೆಲಸಗಳಾಗಬೇಕೆಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಇದರ ಉದ್ದೇಶ ಆಡಳಿತ ಭಾಷೆ ಕನ್ನಡವಾಗಬೇಕೆಂದಿದ್ದರೂ ಅದು ಪರಿಪೂರ್ಣವಾಗಿ ಆಗಬೇಕಾದರೆ ಕನ್ನಡದಲ್ಲಿ ನಿಘಂಟು ಆಗಬೇಕು, ವಿಶ್ವಕೋಶವಾಗಬೇಕು. ಎಲ್ಲಾ ಹಂತಗಳಲ್ಲಿಯೂ ಅದರಲ್ಲೂ ವಿದ್ಯಾಭ್ಯಾಸ

ಕ್ರಮದಲ್ಲಿ ಮುಖ್ಯವಾಗಿ ಕನ್ನಡಭಾಷೆಯನ್ನೇ ಏರ್ಪಡಿಸಬೇಕು, ಎಂಬುದಾಗಿ ನಾನಾ ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ. ಅವೆಲ್ಲವು ಯೋಗ್ಯವಾದುವಾದ್ದರಿಂದ ಅವನ್ನು ಸರ್ಕಾರದವರು ಗಾಂಭೀರ್ಯವಾಗಿ ಆಲೋಚನೆ ಮಾಡಬೇಕಾದುದು ಅವಶ್ಯಕ. ಸಾಮಾನ್ಯವಾಗಿ ಎಲ್ಲರೂ ಈ ಮಸೂದೆಯನ್ನು ಸ್ವಾಗತಿಸಿದ್ದಾರೆ. ಆದರೆ ಒಬ್ಬ ಸದಸ್ಯರು ...

Sri B. P. KADAM.—You forget us as if we are slaves here.

Sri S. NIJALINGAPPA.–If they want to be slaves Ihave no objection.

Sri B. P. KADAM.—You are treating us like slaves.

Mr. SPEAKER.—One interjection will perhaps be good but if the member goes on repeating it is not good.

Sri B. P. KADAM.—What else are we to do if we are not given chance to speak?

Mr. SPEAKER.—Does it justify that the Hon'ble member is making interjections one after another?

Sri B. P. KADAM.—If time is not allowed to us to give vent to our feelings and if the Chief Minister assumes many things, what are we to do?

Mr. SPEAKER.—That does not mean that he can violate the rules.

Sri B. P. KADAM.—It is not a question of violating the rules, but it is a question of bringing out facts.

Mr. SPEAKER.—Order, order.

ಶ್ರೀ ಎಸ್. ನಿಜಲಿಂಗಪ್ಪ.—ಒಬ್ಬ ಸದಸ್ಯರು ಮಾತ್ರ ಇದು ಬೇಕಿಲ್ಲವೆಂದು ಹೇಳದೆ ಹೋದರೂ ಇದು ಸಕಾಲವಲ್ಲ, ಇಂತಹ ತುರ್ತು ಪರಿಸ್ಥಿತಿಯಲ್ಲಿ ಇದನ್ನು ತರುವ ಅವಶ್ಯಕತೆಯೇನೂ ಇರಲಿಲ್ಲವೆಂದು ಹೇಳಿದ್ದಾರೆ.

3-30 P.M.

ಆದುದರಿಂದ ವಿರೋಧಮಾಡಿರುವವರು ಯಾರೂ ಇಲ್ಲವೆಂದು ಪುನಃ ಒತ್ತಿ ಹೇಳುತ್ತೇನೆ. ಶ್ರೀಮಾನ್ ವಿ. ಎಸ್. ಪಾಟೀಲ್ ಅವರು ಇದನ್ನು ಈ ತುರ್ತು ಪರಿಸ್ಥಿತಿಯಲ್ಲಿ ತರಬಾರದಾಗಿತ್ತು, ಎಲ್ಲರಲ್ಲಿಯೂ ಭಾವೈಕ್ಯತೆ ಬೆಳೆಯಬೇಕೆಂದು ಹೇಳುವಾಗ ಇದು ಬೇಕಾಗಿರಲಿಲ್ಲ ಎಂದು ಹೇಳಿದರು. ಇದು ನಮ್ಮೆಲ್ಲರ ಮನಸ್ಸಿಗೆ ಯೋಗ್ಯವಾದ ಅಭಿಪ್ರಾಯವಲ್ಲ, ನಾನು ಮೊದಲು ಅರಿಕೆ ಮಾಡಿಕೊಂಡ ಹಾಗೆ ಈ ಮಸೂದೆ ಸಾಕಷ್ಟು ತಡವಾಗಿ ಬಂದಿದೆ. ಆಯಾ ಪ್ರದೇಶದಲ್ಲಿ ಪ್ರಜಾ ಪ್ರಭುತ್ವ ಆಡಳಿತ ಚೆನ್ನಾಗಿ ಯಶಸ್ವಿಯಾಗಿ ನಡೆಯಬೇಕಾದರೆ, ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಇರಬೇಕು. ಬಹುಸಂಖ್ಯಾತರ ಭಾಷೆಗೆ ಮನ್ನಣೆ ಮೊದಲು ನೀಡಲೇ ಬೇಕು. ತಡವಾದರೂ ಈ ಹೊತ್ತು ಈ ಮಸೂದೆ ಬಂದಿದೆ, ಇದಕೆ ಎಲ್ಲಕಡೆಯಿಂದಲೂ ಸ್ವಾಗತ ಬಂದಿರುವುದರಿಂದ ಸಂತೋಷವಾಗಿದೆ. ಒಬ್ಬ ಸದಸ್ಯರು ವಿರೋಧ ಮಾಡದಿದ್ದರೆ ಇನ್ನೂ ಚೆನ್ನಾಗಿತ್ತು. ಆ ಮನೋಭಾವಕ್ಕೆ ಏನು ಹೇಳಬೇಕೋ ಗೊತ್ತಿಲ್ಲ, ಹಾಗೆಯೇ ಬಿಡುವುದು ಒಳ್ಳೆಯದು. ಮಾನ್ಯ ಸದಸ್ಯರು ಇನ್ನೊಂದು ವಿಚಾರವನ್ನು ಹೇಳಿದರು. ಇಂಗ್ಲೀಷನ್ನೇ ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ಹೇಳಿದರು. ಇದನ್ನು ಮುಂದುವರಿಸುವುದು ಅವಶ್ಯಕ. ನೂರೈವತ್ತು ಇನ್ನೂರು ವರ್ಷಗಳಿಂದ ನಮ್ಮ ಜನ ಜೀವನದಲ್ಲಿ, ಅದರಲ್ಲಿಯೂ ವಿದ್ಯಾವಂತರಲ್ಲಿ ಹಾಸುಹೊಕ್ಕಾಗಿ ಇಂಗ್ಲೀಷ್ ಬೆಳೆದುಕೊಂಡು ಬಂದಿದೆ. ಪದವೀಧರರೆಲ್ಲರೂ ಅಭ್ಯಾಸ ಮಾಡಿದ್ದಾರೆ. ಹೀಗಿರುವಾಗ ಕಾನೂನುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲ ಕಡೆಯೂ ಒಂದೇ ದಿವಸದಲ್ಲಿ ಇದನ್ನು ಪೂರ್ತಿಯಾಗಿ ಬಿಟ್ಟು ಬಿಡಬೇಕೆಂದು ಹೇಳುವುದು ಸಾಧುವಲ್ಲ; ವ್ಯವಹಾರ ದೃಷ್ಟಿಯಿಂದ ಇದು ಸರಿಯಲ್ಲ. ಆದುದರಿಂದಲೇ ಹದಿನೈದು ವರ್ಷ ಕಾಲಾವಕಾಶ ಕೊಟ್ಟಿದ್ದಾರು. ಆದರೂ ಈ ಹದಿನೈದು ವರ್ಷಗಳಲ್ಲಿ ಸಾಕಷ್ಟು ಮಟ್ಟಿಗೆ ಹಿಂದಿ ಭಾಷೆ ಮತ್ತು ಇತರ ಭಾಷೆಗಳಲ್ಲಿ ಶಬ್ದಕೋಶ ಬೆಳೆಯಲಿಲ್ಲ, ಶಬ್ದ ಭಂಡಾರ ಬೆಳೆಯಲಿಲ್ಲ, ಟೆಕ್ನಿಕಲ್ ಎಂದರೆ, ಪಾರಿಭಾಷಿಕ ಪದಗಳು ಸಾಕಷ್ಟು ಬೆಳೆಯಲಿಲ್ಲ. ಯಾರ ಮಾತೃಭಾಷೆ ಹಿಂದಿಯಾಗಿದೆಯೋ, ಯಾರು ಹಿಂದಿಯನ್ನು ಚೆನ್ನಾಗಿ ಬಲ್ಲರೋ ಅವರಿಂದ ಕೂಡ ಇನ್ನೂ ಕೆಲಕಾಲ ಇಂಗ್ಲೀಷ್‌ನಲ್ಲೇ ವ್ಯವಹಾರ ನಡೆಯುವುದು ಅವಶ್ಯಕ ಎಂದು ಒತ್ತಾಯ ಬಂದಿದೆ. ಅದರಲ್ಲಿಯೂ ಪೂರ್ವ ಮತ್ತು ದಕ್ಷಿಣ

(ಶ್ರೀ ಎಸ್. ನಿಜಲಿಂಗಪ್ಪ)

ಭಾರತದಲ್ಲಿ ಇನ್ನೂ ಕೆಲಕಾಲ ಇಂಗ್ಲೀಷನ್ನು ಮುಂದುವರಿಸಬೇಕೆಂದು ಜನ ನಾಯಕರು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಇದು ಅವಶ್ಯಕ. ಯಾರೂ ಇಂಗ್ಲೀಷನ್ನು ಒಪ್ಪಿಕೊಂಡು ವರ್ಷಾಂತರ, ಶತಮಾನ ಕಾಲ ಅದರಲ್ಲಿಯೇ ವ್ಯವಹಾರ ನಡೆಯಬೇಕೆಂದು ಇಚ್ಛೆ ಪಡುತ್ತಿಲ್ಲ. ಇಂಗ್ಲೀಷ್ ಭಾಷೆಯನ್ನು ಕಂಡರೆ ವ್ಯಾಮೋಹವಿದ್ದರೂ ಅದು ನಮ್ಮ ಭಾಷೆಯೆಂದು ಒಪ್ಪಿಲ್ಲ. ಎಂಟನೆಯ ಷೆಡ್ಯೂಲ್‌ನಲ್ಲಿ ಇದು ರಾಷ್ಟ್ರಭಾಷೆಯಾಗಬೇಕೆಂದು ಅಪೇಕ್ಷೆಪಟ್ಟು ಒಪ್ಪಿಲ್ಲ. ಇದು ಇನ್ನೂ ಕೆಲಕಾಲ ಉಳಿಯಬೇಕೆಂದಿದೆಯೇ ಹೊರತು ಶಾಶ್ವತವಾಗಿ ಆಡಳಿತ ಭಾಷೆಯಾಗಿ ಇದರಲ್ಲೇ ವ್ಯವಹಾರ ನಡೆಯಬೇಕೆಂದು ಒಪ್ಪುವುದಿಲ್ಲ. ಆದರೂ ಈ ವಿಶೇಷ ಪರಿಸ್ಥಿತಿಯಲ್ಲಿ ಇದು ಈಗಿರುವಂತೆ ನಡೆಯಬೇಕಾಗುತ್ತದೆ. ಹಿಂದೆ ಶ್ರೀಮಾನ್ ಪಾಟೀಲರು ಮಾತನಾಡುತ್ತ ಇವರಿಗೆ ಇಂಗ್ಲೀಷ್‌ನಲ್ಲಿ ವ್ಯಾಮೋಹವಿದೆ ಆದರೆ ಅಕ್ಕಪಕ್ಕದಲ್ಲಿರುವ ಭಾಷೆಗಳಲ್ಲಿ ಮಾತ್ರ ಇಲ್ಲವೆಂದು ಹೇಳಿದರು; ಹಾಗಲ್ಲ ಆಡಳಿತ ದೃಷ್ಟಿಯಿಂದ ಮರಾಠಿ, ತೆಲುಗು, ತಮಿಳು, ಮಲಯಾಳಿ ಈ ಎಲ್ಲದರಲ್ಲಿಯೂ ಅಭಿಮಾನವಿದೆ. ನಮ್ಮ ಭಾಷೆ ರಾಜ್ಯಾಂಗದಲ್ಲಿ ಸೇರುವ 14 ಭಾಷೆಗಳಲ್ಲಿ ಸೇರಿದೆ. ಈ ಎಲ್ಲ ಭಾಷೆಗಳಲ್ಲಿಯೂ ನಮಗೆ ಸಾಕಷ್ಟು ವ್ಯಾಮೋಹವಿದೆ. ಇಂಗ್ಲೀಷ್ ಭಾಷೆ ಬೇಕು, ಪಕ್ಕದ ಭಾಷೆಗಳು ಬೇಕಾಗಿಲ್ಲ ಎಂದು ಅವರು ಹೇಳಿದರು. ಅದು ಸರಿಯಲ್ಲ, ನಮಗೆ ಎಲ್ಲದರಲ್ಲಿಯೂ ಪ್ರೀತಿಯುಂಟು. ಈ ರೀತಿ ವಾದವನ್ನು ಅವರು ಮಾಡಬಾರದು. ಆ ಮಾನ್ಯ ಸದಸ್ಯರು ಕಚೇರಿಗೆ ಹೋಗುತ್ತಾರೆ, ಕೋರ್ಟಿಗೆ ಹೋಗುತ್ತಾರೆ, ವ್ಯವಹಾರ ನಡೆಸುತ್ತಾರೆ, ಅಲ್ಲಿ ಮಾತ್ರ ಕನ್ನಡ ಬೇಕು, ಇಲ್ಲಿ ಮಾತ್ರ ಬೇಡವೇ ?

ಶ್ರೀ ಬಿ. ಪಿ. ಕದಂ.—ನಮಗೆ ಕನ್ನಡ ಬರುವುದಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನೂ ಕನ್ನಡದಲ್ಲಿಯೇ ಹೇಳುತ್ತಾರೆ ! (ನಗು !)

Mr. SPEAKER.—What has the Hon'ble member to say to that ?

Sri B. P. KADAM.—I know a few words. That does not give me any superiority or claim over others. The Chief Minister said that I was a Master in Kannada. He must know that I have my own limitation in Kannada.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಅವರಿಗೆ ವ್ಯವಹಾರಕ್ಕೆ ಮಾತ್ರ ಕನ್ನಡ ಬೇಕು, ಆದರೆ ಇಲ್ಲಿಗೆ ಬಂದಾಗ ಅದನ್ನು ಬಿಟ್ಟುಬಿಡುವುದೇ ? ಜನರ ಸೇವೆ ಮಾಡುವವರು ಆ ಭಾಷೆ ಬರುವವರು ಮಾತ್ರವಲ್ಲ ಅಥವಾ ಭಾಷೆ ಬಂದರೆ ಮಾತ್ರ ಸಾಲದು, ಆ ಪ್ರದೇಶದ ಜನರ ಸೇವೆ ಮುಖ್ಯ. ಆದುದರಿಂದ ಇಲ್ಲಿ ಕನ್ನಡದಲ್ಲಿ ಮಾತನಾಡದಿದ್ದರೆ ಅದರಿಂದ ಅಲ್ಲೋಲ ಕಲ್ಲೋಲವಾಗುವುದಿಲ್ಲ. ಯಾವ ಭಾಷೆಯಲ್ಲಿ ಮಾತನಾಡಿದರೆ ಎಲ್ಲರಿಗೂ ತಿಳಿಯುತ್ತದೆಯೋ ಅದನ್ನು ತಿಳಿದುಕೊಳ್ಳುವುದು ಉತ್ತಮ.

(Interruption)

ಈ ಹೊತ್ತು ಅಧಿಕೃತ ಭಾಷೆಯ ಈ ಮಸೂದೆಯನ್ನು ತಂದಿದೆ. ಯಾವ ಜನರು ಹೆಚ್ಚಾಗಿ ಮಾತನಾಡುತ್ತಾರೋ ಆ ಭಾಷೆಯಲ್ಲಿ ಆಡಳಿತ ನಡೆಸುವುದು ಅವಶ್ಯಕ. ಹೀಗೆಂದ ಮಾತ್ರಕ್ಕೆ ಅಲ್ಪಸಂಖ್ಯಾತರು ಮಾತನಾಡುವ ಭಾಷೆಯನ್ನಾಗಲೀ ಅವರನ್ನಾಗಲೀ ತಾತ್ಸಾರ ಮಾಡುವುದು ನಮ್ಮ ಉದ್ದೇಶವಲ್ಲ. ಮೈಸೂರು ಸರ್ಕಾರದವರು ಯಾವತ್ತೂ ಅಲ್ಪ ಸಂಖ್ಯಾತರಿಗೆ ಅನ್ಯಾಯ ಮಾಡಿಲ್ಲ. ಆ ಮಾನ್ಯ ಸದಸ್ಯರ ಪ್ರದೇಶದಲ್ಲಿ ಮೊದಲು ಎಷ್ಟು ಮರಾಠಿ ಶಾಲೆಗಳಿದ್ದವೊ, ಎಷ್ಟು ವಿದ್ಯಾರ್ಥಿಗಳಿದ್ದರೋ, ಎಷ್ಟು ಕಟ್ಟಡಗಳಿದ್ದವೋ ಈಗ ಅದಕ್ಕಿಂತ ಶೇಕಡ 50-60ರಷ್ಟು ಜಾಸ್ತಿಯಾಗಿವೆ. ಆದುದರಿಂದ ನನ್ನ ಆ ಸ್ನೇಹಿತರು ಎಲ್ಲ ಸಂದರ್ಭಗಳಲ್ಲಿಯೂ ರಾಜಕೀಯ ಮಾಡುವುದು ಸರಿಯಲ್ಲ. ಇದರಿಂದ ಯಾರ ಸೇವೆ ಮಾಡಬೇಕೆಂದು ಅವರು ಬಂದಿದ್ದಾರೋ ಅದು ಆಗುವುದಿಲ್ಲ.

ಸ್ವಾಮಿ, ಈ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವರು 4 ನೆಯ ಕ್ಲಾಜಿನ ವಿಚಾರದಲ್ಲಿ ಸ್ವಲ್ಪ ಅನುಮಾನ ಪಡುತ್ತಿದ್ದಾರೆ. ನಮ್ಮಲ್ಲಿ ಈ ಕನ್ನಡದಮೇಲೆ ಸಾಕಷ್ಟು ಅಭಿಮಾನವಿದೆಯೋ ಇಲ್ಲವೋ, ಹಂತಹಂತವಾಗಿ ಇದನ್ನು ಜಾರಿಗೆ ತರಬೇಕೆಂದಿದ್ದಾರೆ ಎಂಬ ಅನುಮಾನ ವ್ಯಕ್ತ ಪಡಿಸಿದರು, ಇದನ್ನು ಸಾಕಷ್ಟು ಆಲೋಚನೆಮಾಡಿ ಮಾಡಲಾಗಿದೆ. ಈ ಹೊತ್ತು ಮಸೂದೆ ಅಂಗೀಕೃತವಾಗಿ ಕಾನೂನಾದರೆ ನಾಳೆಯಿಂದಲೇ ಈಗಿರುವ ಎಲ್ಲವನ್ನೂ ಕಿತ್ತುಹಾಕಿ ಹೊಸ ಅಧ್ಯಾಯವನ್ನೇ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಎಲ್ಲವನ್ನೂ ಕೂಲಂಕಷವಾಗಿ ಆಲೋಚನೆಮಾಡಿ ಇದನ್ನು ತಂದಿದ್ದೇವೆ. ಆದಷ್ಟು ಕಡಮೆ ಕಾಲವನ್ನು ತೆಗೆದುಕೊಂಡು ಅಧಿಕೃತ ಭಾಷೆ ಕನ್ನಡ ಆಗಬೇಕೆಂಬು

ದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತಿದ್ದೇವೆ. ಇದನ್ನು ಸದಸ್ಯರೆಲ್ಲರೂ ಒಪ್ಪಬೇಕೆಂದು ಕಳಕಳಿಯಿಂದ ಕೇಳುತ್ತಿದ್ದೇನೆ. ಏನೋ ಕಾರಣ ಹೇಳಿ ಮುಂದೆ ಹಾಕಬೇಕೆಂಬ ಉದ್ದೇಶವಿಲ್ಲ. ಇದು ಮಾಯಾಮೃಗದಂತಿದೆಯೆಂದು ಕೆಲವರು ಹೇಳಿದರು. ಪಾಪ! ಅವರಿಗೆ ಸಿಕ್ಕಿದುದೆಲ್ಲವೂ ಮಾಯಾಮೃಗವೋ ಏನೊ! ಈ ಸಭೆಯಲ್ಲಿಯೂ ಹೊರಗೂ ಯಾರಿಗೆ ಕನ್ನಡದಲ್ಲಿ ಎಷ್ಟು ಅಭಿಮಾನವಿದೆಯೋ ಅಷ್ಟೇ ಅಭಿಮಾನ ನಮ್ಮೆಲ್ಲರಿಗೂ ಇದೆ. ಕನ್ನಡ ಭಾಷೆ ರಾಜ್ಯ ಭಾಷೆ, ಆಡಳಿತ ಭಾಷೆಯಾಗಬೇಕು. ಇದಕ್ಕೆ ಎಷ್ಟು ಪ್ರಯತ್ನ ಮಾಡಬೇಕೋ ಅಷ್ಟನ್ನೂ ಮಾಡು ವುದು ಸರ್ಕಾರ ಹಾಗೂ ಜನತೆಯ ಕರ್ತವ್ಯ. ಆದಷ್ಟು ಬೇಗ ಯಾವ ಅಡ್ಡಿ ಆತಂಕವೂ ಇಲ್ಲದಂತೆ ಜಾರಿಗೆ ತರುವುದಕ್ಕೆ ಪ್ರಯತ್ನ ನಡೆಯುತ್ತದೆ. ಕನ್ನಡದಲ್ಲಿ ಸಾಹಿತ್ಯದ ಕೊರತೆಯಿಲ್ಲ. ಬೇರೆ ಯಾವ ಭಾಷೆಯನ್ನು ತೆಗೆದುಕೊಂಡರೂ ಅದಾವುದಕ್ಕೂ ಕಡಿಮೆಯಿಲ್ಲದಷ್ಟು ಸಾಹಿತ್ಯ ಕನ್ನಡದಲ್ಲಿದೆ.

ಅತ್ಯಂತ ದೊಡ್ಡ ಸಾಹಿತ್ಯ ಕನ್ನಡದಲ್ಲಿದೆ; ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಸಾಹಿತ್ಯವಿದೆ. ಕೆಲವು ಶಬ್ದಗಳ ಅಭಾವದಿಂದ ಅದನ್ನು ಮುಂದೂಡಬೇಕೆಂಬ ಉದ್ದೇಶ ಯಾರಿಗೂ ಇಲ್ಲ. ಆದಷ್ಟು ಜಾಗ್ರತೆ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಬೇಕು, ಆದಷ್ಟು ಜಾಗ್ರತೆ ಎಲ್ಲ ಕಡೆಯೂ ಜಾರಿಗೆ ಬರಬೇಕು. ಕನ್ನಡವು ಆಡಳಿತ ಭಾಷೆಯಾಗುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇಂಗ್ಲಿಷ್ ಭಾಷೆಯ ವಿಚಾರದಲ್ಲಿ ಆಗಲೇ ಅರಿಕೆ ಮಾಡಿಕೊಂಡಿದ್ದೇನೆ. ಕಾರಣಾಂತರದಿಂದ ಕೆಲವು ಕಾಲದಿಂದ ಇರುವುದು ಶಾಶ್ವತವಾಗಿ ಉಳಿಯಬೇಕು, ಕಾನೂನು ಮಾಡತಕ್ಕ ಭಾಷೆಯಾಗಿ ಉಳಿಯಬೇಕು ಎಂದು ಉದ್ದೇಶವಲ್ಲ. ಇವೊತ್ತು ನಾವು ಮಾಡತಕ್ಕ ಕಾನೂನುಗಳು ಕೆಲವು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕವಾಗಿರುತ್ತವೆ, ಕೆಲವು ಬೇರೆ ರಾಜ್ಯಗಳಿಗೆ ಸಂಬಂಧಪಟ್ಟಿರ ತಕ್ಕದ್ದಿರುತ್ತವೆ. ಆದುದರಿಂದ ಕೆಲವು ದಿನ ಇಂಗ್ಲಿಷನ್ನು ಉಳಿಸಿಕೊಂಡು ಬರುತ್ತೇವೆ.

ಆರನೆಯ ಕ್ಲಾಜ್ ವಿಚಾರದಲ್ಲಿ ಏನೋ ಅನುಮಾನ ಹೇಳಿದರು. ಮುಂದೆ ತಳ್ಳುವುದಕ್ಕೆ ಯಾವುದೋ ಒಂದು ವಿಚಿತ್ರವಾಗಿ ಭಾಷೆಯನ್ನು ಅನ್ವಯಿಸಿದ್ದಾರೆ ಎಂದು. ಎಲ್ಲರಿಗೂ ತಿಳಿಯಲಿ ಎನ್ನುವ ಉದ್ದೇಶದಿಂದ ಅಸೆಂಬ್ಲಿ ಮತ್ತು ಕೌನ್ಸಿಲ್ ಮುಂದೆ ಇಟ್ಟು ಅವರ ಅಭಿಪ್ರಾಯಗಳನ್ನು ತಿಳಿದುಕೊಂಡು ಅದಕ್ಕೆ ಮಾನ್ಯತೆ ಕೊಡಬೇಕೆಂಬ ದೃಷ್ಟಿಯಿಂದ ಇದನ್ನು ಹಾಕಲಾಯಿತು, ಮತ್ತೆ ಯಾವ ಉದ್ದೇಶವೂ ಇಲ್ಲ. ಆದುದರಿಂದ ಎಲ್ಲಿ ವಿರೋಧವಿಲ್ಲವೋ ಅಲ್ಲಿ ಹೆಚ್ಚಾಗಿ ಮಾತನಾಡ ತಕ್ಕದ್ದು ಅನಾವಶ್ಯಕ, ಈ ವಿಧೇಯಕವನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಸಭೆಯ ಮುಂದೆ ಇಡುತ್ತಿದ್ದೇನೆ.

Sri N. O. SAMAJI (Belgaum II—in Marathi).—

[Translated by Sri B. P. Kadam.—In the border area, 70 per cent of the people are speaking Marathi and they read and write Marathi; where Marathi is not recognised as State language, What will be their fate ?]

Sri S. NIJALINGAPPA.—The fate would be as it is today. Whatever is happening today, we are not changing. Let me assure my friend that nothing will be done to harm them.

Sri B. P. KADAM.—.........hell..... ...

Mr. SPEAKER.—That is a word not to be used. I hope the member will take note of it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮುಖ್ಯ ಮಂತ್ರಿಗಳ ಉತ್ತರದಿಂದ ಸಂತೃಪ್ತಿಯಾದರೂ ಒಂದು ವಿಷಯವನ್ನು ಮಾತ್ರ ಕೇಳುತ್ತೇನೆ. ಕನ್ನಡ ಸಂಶೋಧನಾ ಕೇಂದ್ರ, ಕನ್ನಡ ವಿಶ್ವಕೋಶ ಮತ್ತು ಕನ್ನಡ ನಿಘಂಟು ಇವು ಮೂರರ ವಿಚಾರದಲ್ಲಿಯೂ ಏನನ್ನೂ ಹೇಳಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ನೇರವಾಗಿ ಸಂಬಂಧಪಟ್ಟಿಲ್ಲವೆಂದು ಹೇಳಲಿಲ್ಲ. ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡಬೇಕಾದರೆ ಏನು ಸಹಾಯ ಕೊಡಬಹುದೋ, ಹಣ ಸಹಾಯ ಕೊಡ ಬಹುದೋ ಅದನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು ಹೇಳಿದ್ದೇನೆ.

Mr. SPEAKER.—The question is :

"That the Mysore Official Language Bill, 1963, be taken into consideration."

The motion was adopted.

Mr. SPEAKER.—We will take up the Bill clause by clause. For clause 2 there are four amendments. I request the Hon'ble Members to move them. Amendment No.2 is in the name of Sri V. S. Patil and Sri B. R. Sunthankar. May I ask Sri Suntankar to move it ?

Sri B. R. SUNTHANKAR.—I beg to move :

"That in line 2, after the word 'Kannada', the words 'Hindi and English' shall be added."

Mr. SPEAKER.—Amendment moved :

"That in line 2, after the word 'Kannada', the words 'Hindi and English' shall be added."

Would the Hon'ble Member Sri Sunthankar also move the next amendment ?

Sri B. R. SUNTHANKAR.—I beg to move :

"That the following proviso shall be added to clause 2 :—

"Provided that the Official language along with Kannada of a district or a taluk or a village shall be any other language than Kannada, if more than twenty per cent of the inhabitants of that District or Taluk or village speak any other language than Kannada."

Mr. SPEAKER.—Amendment moved :

"That the following proviso shall be added to clause 2 :—

"Provided that the Official language along with Kannada of a district or a taluk or a village shall be any other language than Kannada, if more than twenty per cent of the inhabitants of that District or Taluk or village speak any other language than Kannada."

Mr. SPEAKER.—Sri Patil may move his amendment.

Sri V. S. PATIL.—Sir, I beg to move :

"That the following second proviso shall be added to clause 2 :—

"Provided further that the languages used as Official languages in any district, taluk and village shall be continued for a further period of ten years."

Mr. SPEAKER.—Amendment moved :

"That the following second proviso shall be added to clause 2 :—

"Provided further that the languages used as Official languages in any district, taluk and a village shall be continued for a further period of ten years."

But the member has not indicated where it should be inserted.

Sri V. S. PATIL.—That is why I have stated "another proviso."

Mr. SPEAKER.—Another proviso can be put anywhere. The member must number them serially. If he wants to put it as second proviso, then he must have numbered it.

Sri Gopala Gowda may move his amendment.

Sri S. GOPALA GOWDA.—I beg to move:

"That in clause 2 for the words 'the Official Language', the words "the State Language" shall be substituted.'"

Mr. SPEAKER.—Amendment moved :

"That in clause 2 for the words 'the Official Language', the words 'the State Language' shall be substituted."

All the four amendments to the clause (2) are before the House.

† Sri B. R. SUNTHANKAR (Belgaum City).—Sir, I am moving this and other amendments because, we the members coming from the Marathi border area, cannot support this Bill in the present form. Sir, my Hon'ble colleague Sri V. S. Patil has rightly described the feelings and re-actions to this Bill of the members of the Maharashtra Ekikarna Samithi as well as the people coming from the Marathi border area. Sir, this is a controversial Bill and it is surely going to invite trouble in the Marathi border areas. I am surprised at the speeches of some of the Hon'ble Members. Particularly, Sir, I regret very much the mode of approach to the problem of language that was placed before this House by my Hon'ble dear friend Sri Gopala Gowda. Sir, his approach, I may be excused if I say, is rabid and fanatic.

[*Interruption*].

It is fanatic. Certainly we are not fanatics.

Sri G. V. GOWDA.—It is not fanatic.

Sri B. R. SUNTHANKAR.—The way in which he put it, his approach is fanatic, because he said that the club was rolling and that it might strike anybody's head if anybody tried to protest. Perhaps like the Australian boomerang, some day it may hit the head of Sri Gopala Gowda. We are told on the floor of the House to have a 'vishala drishti'. Sri Dodmeti said that we should have a 'vishala drishti'. I may humbly say the same to him. He should have that broad outlook, broad-mind and 'vishala drishti' in the case of Marathi speakers in the border areas. What is the test of democracy? We are wedded to democracy by the Constitution of the country. The test of democracy is toleration and the treatment the minorities get in that democracy. What sort of treatment the minorities are getting in the State? The minorities are subjected to the tyranny of the majority. The majority has been tyrannical. We the people coming from the border areas are subjected to inferiority citizenship because we do not know the language of the Karnatak. That has been our curse; that has been our disqualification.

